**Lang. Code : 07**

इस पुस्तिका में **20** पृष्ठ हैं ।
This booklet contains **20** pages.

# AAT-20-II

**प्रश्न-पत्र II / PAPER II**

**कन्नड़ भाषा परिशिष्ट**
**Kannada Language Supplement**
**भाग IV & V / PART IV & V**

**परीक्षा पुस्तिका संकेत**
**Test Booklet Code**

**M**

**परीक्षा पुस्तिका संख्या**
**Test Booklet No.**

**इस परीक्षा पुस्तिका को तब तक न खोलें जब तक कहा न जाए ।**
**Do not open this Test Booklet until you are asked to do so.**
**इस परीक्षा पुस्तिका के पिछले आवरण (पृष्ठ 19 व 20) पर दिए निर्देशों को ध्यान से पढ़ें ।**
**Read carefully the Instructions on the Back Cover (Page 19 & 20) of this Test Booklet.**

**कन्नड़ में निर्देशों के लिए इस पुस्तिका का पृष्ठ 2 देखें । / For instructions in Kannada see Page 2 of this Booklet.**

## परीक्षार्थियों के लिए निर्देश

1. यह पुस्तिका मुख्य परीक्षा पुस्तिका की एक परिशिष्ट है, उन परीक्षार्थियों के लिए जो **या** तो भाग IV (भाषा I) **या** भाग V (भाषा II) **कन्नड़** भाषा में देना चाहते हैं, लेकिन **दोनों नहीं** ।
2. परीक्षार्थी भाग I एवं भाग II या III के उत्तर मुख्य परीक्षा पुस्तिका से दें और भाग IV व V के उत्तर उनके द्वारा चुनी भाषाओं से ।
3. अंग्रेज़ी व हिन्दी भाषा पर प्रश्न मुख्य परीक्षा पुस्तिका में भाग IV व भाग V के अन्तर्गत दिए गए हैं । भाषा परिशिष्टों को आप अलग से माँग सकते हैं ।
4. इस पृष्ठ पर विवरण अंकित करने एवं उत्तर पत्र पर निशान लगाने के लिए **केवल काले/नीले बॉल पॉइंट पेन** का प्रयोग करें ।
5. इस भाषा पुस्तिका का **संकेत** है **M** । यह सुनिश्चित कर लें कि इस भाषा परिशिष्ट पुस्तिका का संकेत, उत्तर पत्र के **पृष्ठ**-2 एवं मुख्य परीक्षा पुस्तिका पर छपे संकेत से मिलता है । अगर यह भिन्न हो, तो परीक्षार्थी दूसरी भाषा परिशिष्ट परीक्षा पुस्तिका लेने के लिए निरीक्षक को तुरन्त अवगत कराएँ ।
6. इस परीक्षा पुस्तिका में **दो** भाग IV और V हैं, जिनमें **60** वस्तुनिष्ठ प्रश्न हैं, जो प्रत्येक 1 अंक का है :
   भाग-IV : भाषा-I (कन्नड़) (प्र. 91 से प्र. 120)
   भाग-V : भाषा-II (कन्नड़) (प्र. 121 से प्र. 150)
7. भाग-IV में भाषा-I के लिए 30 प्रश्न और भाग-V में भाषा-II के लिए 30 प्रश्न दिए गए हैं । इस परीक्षा पुस्तिका में केवल कन्नड़ भाषा से संबंधित प्रश्न दिए गए हैं । **यदि भाषा-I और/या भाषा-II में आपके द्वारा चुनी गई भाषा(एँ) कन्नड़ के अलावा है तो कृपया उस भाषा वाली परीक्षा पुस्तिका माँग लीजिए । जिन भाषाओं के प्रश्नों के उत्तर आप दे रहे हैं वह आवेदन पत्र में चुनी गई भाषाओं से अवश्य मेल खानी चाहिए ।**
8. **परीक्षार्थी भाग-V (भाषा-II) के लिए, भाषा सूची से ऐसी भाषा चुनें जो उनके द्वारा भाषा I (भाग-IV) में चुनी गई भाषा से भिन्न हो ।**
9. रफ कार्य परीक्षा पुस्तिका में इस प्रयोजन के लिए दी गई खाली जगह पर ही करें ।
10. सभी उत्तर केवल OMR उत्तर पत्र पर ही अंकित करें । अपने उत्तर ध्यानपूर्वक अंकित करें । उत्तर बदलने हेतु श्वेत रंजक का प्रयोग निषिद्ध है ।

## *INSTRUCTIONS FOR CANDIDATES*

1. This booklet is a supplement to the Main Test Booklet for those candidates who wish to answer **EITHER** Part IV (Language I) **OR** Part V (Language II) in **KANNADA** language, but **NOT BOTH**.
2. Candidates are required to answer Part I, and Part II OR III from the Main Test Booklet and Parts IV and V from the languages chosen by them.
3. Questions on English and Hindi languages for Part IV and Part V have been given in the Main Test Booklet. Language Supplements can be asked for separately.
4. Use **Black/Blue Ball Point Pen only** for writing particulars on this page / marking responses in the Answer Sheet.
5. The CODE for this Language Booklet is **M**. Make sure that the CODE printed on **Side-2** of the Answer Sheet and on your Main Test Booklet is the same as that on this Language Supplement Test Booklet. In case of discrepancy, the candidate should immediately report the matter to the Invigilator for replacement of the Language Supplement Test Booklet.
6. This Test Booklet has **two** Parts, IV and V, consisting of **60** Objective Type Questions, each carrying 1 mark :
   Part-IV : Language I - (Kannada) (Q. 91 to Q. 120)
   Part-V : Language II - (Kannada) (Q. 121 to Q. 150)
7. Part-IV contains 30 questions for Language-I and Part-V contains 30 questions for Language-II. In this Test Booklet, only questions pertaining to Kannada language have been given. **In case the language/s you have opted for as Language-I and/or Language-II is a Language other than Kannada, please ask for a Test Booklet that contains questions on that language. The language being answered must tally with the languages opted for in your Application Form.**
8. **Candidates are required to attempt questions in Part -V (Language-II) in a language other than the one chosen as Language-I (in Part-IV) from the list of languages.**
9. Rough work should be done only in the space provided in the Test Booklet for the same.
10. The answers are to be recorded on the OMR Answer Sheet only. Mark your responses carefully. No whitener is allowed for changing answers.

परीक्षार्थी का नाम (बड़े अक्षरों में) : ____________________
Name of the Candidate (in Capitals) :
अनुक्रमांक : (अंकों में) ____________________
Roll Number : in figures
: (शब्दों में) ____________________
: in words
परीक्षा केन्द्र (बड़े अक्षरों में) : ____________________
Centre of Examination (in Capitals) :
परीक्षार्थी के हस्ताक्षर : ____________________ निरीक्षक के हस्ताक्षर : ____________________
Candidate's Signature : Invigilator's Signature :
Facsimile signature stamp of
Centre Superintendent ____________________

M

**Lang. Code : 07**

# AAT-20-II

**ಪ್ರಶ್ನೆ ಪತ್ರಿಕೆ II**
**ಕನ್ನಡ ಭಾಷಾ ಪೂರಕ**
**ಭಾಗ IV & V**

ಪ್ರಶ್ನೆ ಪುಸ್ತಿಕೆ ಸಂಕೇತ

**M**

ಈ ಪ್ರಶ್ನೆ ಪುಸ್ತಿಕೆ **20** ಪುಟಗಳನ್ನು ಹೊಂದಿರುತ್ತದೆ.

**ಈ ಪ್ರಶ್ನೆ ಪುಸ್ತಿಕೆಯನ್ನು ತೆರೆಯುವಂತೆ ಹೇಳುವವರೆಗೆ ಯಾರೂ ತೆರೆಯಬಾರದು.**

**ಈ ಪ್ರಶ್ನೆ ಪುಸ್ತಿಕೆಯ ಹಿಂದಿನ ಪುಟದಲ್ಲಿ ಕೊಟ್ಟಿರುವ ಸೂಚನೆಗಳನ್ನು (ಪುಟ 19 & 20) ಗಮನವಿಟ್ಟು ಓದಿರಿ.**

**ಪರೀಕ್ಷಾರ್ಥಿಗಳಿಗೆ ಸೂಚನೆಗಳು:**

1. ಈ ಪ್ರಶ್ನೆ ಪತ್ರಿಕೆಯು ಮುಖ್ಯ ಪ್ರಶ್ನೆ ಪುಸ್ತಿಕೆಯ ಪೂರಕ ಪತ್ರಿಕೆಯಾಗಿದ್ದು, ಇದು ಭಾಗ IV (ಭಾಷೆ I) ಅಥವಾ ಭಾಗ V(ಭಾಷೆ II) ನ್ನು ಕನ್ನಡ ಭಾಷೆಯಲ್ಲಿ ಉತ್ತರಿಸಲು ಆಯ್ದುಕೊಂಡ ಅಭ್ಯರ್ಥಿಗಳಿಗೆ ಅನ್ವಯವಾಗುತ್ತದೆ. ಅಭ್ಯರ್ಥಿಗಳು ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದು ಎರಡನ್ನೂ ಅಲ್ಲ.
2. ಅಭ್ಯರ್ಥಿಗಳು ಮುಖ್ಯ ಪ್ರಶ್ನೆ ಪುಸ್ತಿಕೆಯ ಭಾಗ I ಮತ್ತು II ಅಥವಾ III ನ್ನು ಅವಶ್ಯಕವಾಗಿ ಉತ್ತರಿಸಬೇಕು ಮತ್ತು ಪೂರಕ ಪ್ರಶ್ನೆ ಪುಸ್ತಿಕೆಯಿಂದ ಭಾಗ IV ಮತ್ತು V ರ ಉತ್ತರವನ್ನು ತಾವು ಆಯ್ದುಕೊಂಡ ಭಾಷೆಯಲ್ಲಿ ಉತ್ತರಿಸಬೇಕು.
3. ಭಾಗ IV ಭಾಗ V ರ ಇಂಗ್ಲಿಷ್ ಮತ್ತು ಹಿಂದಿ ಭಾಷೆಯ ಪ್ರಶ್ನೆಗಳನ್ನು ಮುಖ್ಯ ಪ್ರಶ್ನೆ ಪುಸ್ತಿಕೆಯಲ್ಲೇ ಕೊಡಲಾಗಿದೆ. ಇತರ ಪೂರಕ ಭಾಷೆಯ ಪುಸ್ತಿಕೆಯನ್ನು ಬೇರೆಯಾಗಿ ಕೇಳಿ ಪಡೆಯಬಹುದು.
4. ಈ ಪುಟದಲ್ಲಿ ವಿವರ ಬರೆಯಲು ಮತ್ತು ಉತ್ತರ ಪತ್ರಿಕೆಯಲ್ಲಿ ಗುರುತು ಮಾಡಲು ಕೇವಲ **ಕಪ್ಪು / ನೀಲಿ ಬಾಲ್ ಪಾಯಿಂಟ್ ಪೆನ್** ಉಪಯೋಗಿಸಿ.
5. ಈ ಭಾಷಾ ಪುಸ್ತಿಕೆಯ ಸಂಕೇತ **M** ಆಗಿದೆ. ಉತ್ತರ ಪತ್ರಿಕೆಯ ಪುಟ-2 ರಲ್ಲಿ ಮುದ್ರಣವಾಗಿರುವ ಸಂಕೇತದೊಡನೆ ಹೊಂದುತ್ತದೆಯೇ ಎಂದು ಸುನಿಶ್ಚಿತಗೊಳಿಸಿಕೊಳ್ಳಿರಿ. ಜೊತೆಗೆ ಪ್ರಶ್ನೆ ಪತ್ರಿಕೆಯ ಸಂಖ್ಯೆ ಮತ್ತು ಉತ್ತರ ಪತ್ರಿಕೆಯ ಸಂಖ್ಯೆ ಸರಿಹೊಂದುವುದನ್ನೂ ಸುನಿಶ್ಚಿತಗೊಳಿಸಿಕೊಳ್ಳಿ. ಒಂದು ವೇಳೆ ಇವೆರಡೂ ಬೇರೆಯಾಗಿದ್ದರೆ, ಪರೀಕ್ಷಾರ್ಥಿ ಬೇರೆ ಪ್ರಶ್ನೆ ಪತ್ರಿಕೆ ಹಾಗೂ ಉತ್ತರ ಪತ್ರಿಕೆ ಕೊಡುವಂತೆ ನಿರೀಕ್ಷಕರಿಗೆ ತಕ್ಷಣ ಮನವಿ ಮಾಡಿರಿ.
6. ಈ ಪ್ರಶ್ನೆ ಪತ್ರಿಕೆಯಲ್ಲಿ ಎರಡು ಭಾಗಗಳಿವೆ IV ಮತ್ತು V, ಇದರಲ್ಲಿ **60** ವಸ್ತುನಿಷ್ಟ ಪ್ರಶ್ನೆಗಳಿವೆ, ಅವುಗಳಿಗೆ ಪ್ರತಿಯೊಂದಕ್ಕೂ 1 ಅಂಕ :
   ಭಾಗ IV : ಭಾಷಾ-I (ಕನ್ನಡ) (ಪ್ರಶ್ನೆ 91 ರಿಂದ 120)
   ಭಾಗ V : ಭಾಷಾ-II (ಕನ್ನಡ) (ಪ್ರಶ್ನೆ 121 ರಿಂದ 150)
7. ಭಾಗ IV ರಲ್ಲಿ ಭಾಷೆ I ಕ್ಕಾಗಿ 30 ಪ್ರಶ್ನೆಗಳು ಮತ್ತು ಭಾಗ V ರಲ್ಲಿ ಭಾಷೆ II ಕ್ಕಾಗಿ 30 ಪ್ರಶ್ನೆಗಳನ್ನು ಕೊಡಲಾಗಿದೆ. ಈ ಪ್ರಶ್ನೆ ಪತ್ರಿಕೆಯಲ್ಲಿ ಕೇವಲ ಕನ್ನಡ ಭಾಷೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೊಡಲಾಗಿದೆ. **ಒಂದು ವೇಳೆ ಭಾಷೆ I ಮತ್ತು/ಅಥವಾ II ರಲ್ಲಿ ನೀವು ಆಯ್ಕೆ ಮಾಡಿದ ಭಾಷೆಗಳು - ಕನ್ನಡ ಅಲ್ಲದೆ ಬೇರೆ ಇದ್ದರೆ, ದಯವಿಟ್ಟು ಆ ಭಾಷೆಯ ಪ್ರಶ್ನೆ ಪತ್ರಿಕೆ ಕೊಡುವಂತೆ ಮನವಿ ಮಾಡಿ. ನಿಮ್ಮ ಮನವಿ ಪತ್ರದಲ್ಲಿ ಆಯ್ಕೆ ಮಾಡಿದ ಭಾಷೆ ಹಾಗೂ ನೀವು ಉತ್ತರ ಬರೆಯುವ ಭಾಷೆ ಹೊಂದಿಕೆಯಾಗಬೇಕು.**
8. ಪರೀಕ್ಷಾರ್ಥಿ ಭಾಗ V (ಭಾಷೆ II) ಕ್ಕಾಗಿ, ಭಾಷೆ I (ಭಾಗ IV) ರಲ್ಲಿ ಆರಿಸಿಕೊಂಡ ಭಾಷೆಯಲ್ಲದೇ ಕೊಟ್ಟಿರುವ ಪಟ್ಟಿಯಲ್ಲಿ ಬೇರೆ ಭಾಷೆಯನ್ನು ಆರಿಸಿಕೊಳ್ಳಬೇಕು.
9. ಕಚ್ಚಾ ಕೆಲಸ/ಬರವಣಿಗೆಯನ್ನು ಪ್ರಶ್ನೆ ಪತ್ರಿಕೆಯಲ್ಲಿ ಅದಕ್ಕಾಗಿಯೇ ಖಾಲಿ ಬಿಟ್ಟಿರುವ ಸ್ಥಾನದಲ್ಲಿಯೇ ಮಾಡಬೇಕು.
10. ನಿಮ್ಮ ಎಲ್ಲಾ ಉತ್ತರಗಳನ್ನು ಕೇವಲ (OMR) ಉತ್ತರ ಪತ್ರಿಕೆಯಲ್ಲಿಯೇ ನಮೂದಿಸಿ. ನಿಮ್ಮ ಉತ್ತರವನ್ನು ಎಚ್ಚರಿಕೆಯಿಂದ ನಮೂದಿಸಿ. ಉತ್ತರ ಬದಲಾಯಿಸಲು ಬಿಳಿಯ ಬಣ್ಣದ (Whitener) ಉಪಯೋಗ ನಿಷೇಧಿಸಲಾಗಿದೆ.

ಪರೀಕ್ಷಾರ್ಥಿಯ ಹೆಸರು (ದೊಡ್ಡ ಅಕ್ಷರಗಳಲ್ಲಿ) ____________________

ಕ್ರಮ ಸಂಖ್ಯೆ : (ಅಂಕೆಗಳಲ್ಲಿ) ____________________

: (ಅಕ್ಷರಗಳಲ್ಲಿ) ____________________

ಪರೀಕ್ಷಾ ಕೇಂದ್ರ (ದೊಡ್ಡ ಅಕ್ಷರಗಳಲ್ಲಿ) ____________________

ಪರೀಕ್ಷಾರ್ಥಿಯ ಸಹಿ ____________________ ನಿರೀಕ್ಷಕರ ಸಹಿ ____________________

Facsimile signature stamp of

Centre Superintendent : ____________________

ಅಭ್ಯರ್ಥಿಗಳು ಕನ್ನಡವನ್ನು ಭಾಷೆ-**I** ಎಂದು ಆರಿಸಿಕೊಂಡಿದ್ದರೆ ಮಾತ್ರ ಭಾಗ-**IV** ರಲ್ಲಿರುವ ಪ್ರಶ್ನೆಗಳನ್ನು (ಪ್ರಶ್ನೆಸಂಖ್ಯೆ **91 - 120)** ಉತ್ತರಿಸಬೇಕು.

Candidates should attempt the questions from **Part-IV (Q.No. 91-120)**, if they have opted **KANNADA** as **Language-I** only.

## ಭಾಗ–IV

## ಭಾಷೆ–I

## ಕನ್ನಡ

ಅಭ್ಯರ್ಥಿಗಳು ಕನ್ನಡವನ್ನು ಭಾಷೆ-I ಎಂದು ಆರಿಸಿಕೊಂಡಿದ್ದರೆ ಮಾತ್ರ ಭಾಗ-IV ರಲ್ಲಿರುವ ಪ್ರಶ್ನೆಗಳನ್ನು (ಪ್ರಶ್ನೆಸಂಖ್ಯೆ 91 - 120) ಉತ್ತರಿಸಬೇಕು.

**ನಿರ್ದೇಶನ : ಈ ಕೆಳಗಿನ ಲೇಖನ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 91 - 99) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

ಒಂದು ದೃಷ್ಟಿಯಿಂದ, ನಮ್ಮ ಸಮಸ್ತ ಬರವಣಿಗೆ ಒಂದು ಬಗೆಯ ನಿರಂತರ ಆತ್ಮಾಭಿವ್ಯಕ್ತಿ ಪ್ರಕ್ರಿಯೆ. ಆದರೂ ಆತ್ಮಕಥೆ ಎಂಬುದು ಉಳಿದ ಸಾಹಿತ್ಯ ಪ್ರಕಾರಗಳಿಗಿಂತ ಭಿನ್ನವಾದ ರಕ್ತ ಮಾಂಸ ನರ ನಾಡಿ ಮಿಡಿತಗಳನ್ನು ಅಪೇಕ್ಷಿಸುವಂಥದು. ಇದು ಸ್ವಯಂ–ಕರಣೀಯ ಶಲ್ಯ ಚಿಕಿತ್ಸಾ ವಿಧಾನ. ಇಲ್ಲಿ ನಮ್ಮನ್ನು ನಾವೇ ಕಿತ್ತು, ಕೊಯ್ದು, ಜೋಡಿಸಿ, ಮಡಿಸಿ, ಹೊಲಿದು ಇಟ್ಟುಕೊಳ್ಳಬೇಕಾಗುತ್ತದೆ. ಹೀಗೆ ಮಾಡುವಾಗ ಒಮ್ಮೊಮ್ಮೆ ಬದುಕಿನ ಹಾದಿಯಲ್ಲಿ ಜೊತೆಗೆ ಹೆಜ್ಜೆ ಹಾಕಿದ್ದವರನ್ನು ನೆನೆಯುವಾಗ ಅವರನ್ನು ನಲಿಸಬಹುದು, ನೋಯಿಸಲೂಬಹುದು. ಆತ್ಮಕಥೆ ಬರೆಯುವುದು ಎರಡೂ ಕಡೆಗೆ ಹರಿತವಾದ ಅಲಗು ಹೊಂದಿದ ಖಡ್ಗದ ಮೇಲೆ ನಡೆದಂತೆ. ಹೇಳಿದರೆ ಕಷ್ಟ, ಹೇಳದಿದ್ದರೆ ಅಪರಾಧ. ಸ್ವಪ್ರಶಂಸೆ, ಅಹಂಕಾರ, ಭಾವುಕತೆ, ಕಲ್ಪನೆ, ಅತಿರಂಜನೆ, ಮರೆವು ಮುಂತಾದವುಗಳ ಭಯಂಕರ ಕೊಳ್ಳಗಳನ್ನು ದಾಟಿ ಬಂದು ಸತ್ಯವನ್ನು, ಸಾಚಾತನವನ್ನು ಮೆರುಗಿನಿಂದ ತೋರಿಸಿ, ನುಡಿದು ಬರೆಯಬೇಕಾಗುತ್ತದೆ. ಮೈತುಂಬ, ಮನಸ್ಸಿನ ತುಂಬ ಕ್ಷಣಕ್ಷಣಕ್ಕೂ ವ್ಯಾಪಿಸುವ ಇಂಥ ಎಚ್ಚರಿಕೆಯ ಚುಚ್ಚುಮುಳ್ಳುಗಳಿಂದ ಆತ್ಮರಕ್ಷಣೆ ಮಾಡಿಕೊಳ್ಳಬೇಕಾಗುತ್ತದೆ. ಆಗ ಆ ಬರವಣಿಗೆ ನಿಜವಾದ, ಯೋಗ್ಯವಾದ ಇತಿಹಾಸವಾಗಿಯೂ ಸಾಹಿತ್ಯವಾಗಿಯೂ ಉಳಿಯುವಂಥ ಕೃತಿಯಾಗುವ ಸಾಧ್ಯತೆ ಹೆಚ್ಚುತ್ತದೆ.

ವಿಚಾರ, ಭಾವ, ಅನಿಸಿಕೆಗಳ ಸಂಕೋಲೆಗಳಿಂದ ಸ್ವಯಂಬಂಧಿತನಾಗಿದ್ದರೂ ಸ್ವಮುಕ್ತಿಗಾಗಿ ಯತ್ನಿಸಿ ನನ್ನನ್ನು ನಾನು ನೋಡಿಕೊಳ್ಳುವ ಈ ಪ್ರಯತ್ನ ಇತಿಹಾಸವಾಗುವುದೋ ಸಾಹಿತ್ಯವಾಗುವುದೋ ಕಥೆಯಾಗುವುದೋ ಬರಿಯ ವ್ಯಥೆಯಾಗುವುದೋ ತಿಳಿಯದು. ಆದರೂ ಬರೆಯುತ್ತೇನೆ. ಹಾಗೆ ನೋಡಿದರೆ ನನ್ನ ಎಲ್ಲ ಬರವಣಿಗೆಗಳೂ ನನ್ನ ಆತ್ಮವೃತ್ತಾಂತಗಳೇ. ನನ್ನ ಮಾತು, ಅಕ್ಷರ, ನಡೆನುಡಿಗಳಲ್ಲಿ ಸಾಧ್ಯವಿದ್ದಷ್ಟು ಪ್ರಾಮಾಣಿಕವಾಗಿ ನನ್ನನ್ನೇ ವ್ಯಕ್ತಗೊಳಿಸುವ ಪ್ರಯತ್ನವನ್ನು ನಾನು ಮಾಡುತ್ತ ಬಂದಿದ್ದೇನೆ. ಈಗ ಅದೇ ನಿಟ್ಟಿನಲ್ಲಿ ಇನ್ನಷ್ಟು ದಟ್ಟ ಹಾಗೂ ದಿಟ್ಟ ಹೆಜ್ಜೆಗಳನ್ನು ಇಲ್ಲಿ ಮೂಡಿಸಬೇಕಾಗಿದೆ.

**ಮನೆತನದ ಬೇರು**

ಎಲ್ಲಿಂದ ಆರಂಭಿಸಲಿ ? ಏನು ಹೇಳಲಿ ? ಏನು ಬಿಡಲಿ ? ಅಕ್ಷರಶಃ ಅಸಂಖ್ಯ ನೆನಪುಗಳ, ಪ್ರಸಂಗಗಳ, ಆಗುಹೋಗುಗಳ ಸಮುದ್ರವೇ ನನ್ನನ್ನು ಕದಡುತ್ತಿದೆ, ಕಲಕುತ್ತಿದೆ, ಹೀಗಾಗಿ ಇಂಥ ಬರವಣಿಗೆಗೆ ಒಂದು ನಿಶ್ಚಿತವಾದ ಆಕಾರವನ್ನಾಗಲಿ ಚೌಕಟ್ಟನ್ನಾಗಲಿ ಕೊಡುವುದು ನನಗೆ ಕಷ್ಟದ ಕೆಲಸ. ನೆನಪುಗಳು, ಅವುಗಳ ಕಾಲಘಟ್ಟಗಳು ಕ್ರಮವಾಗಿ ಅಥವಾ ಸುಸಂಬದ್ಧವಾಗಿ ಬರಲಾರವೆನಿಸುತ್ತದೆ.

ನಮ್ಮ ಮನೆತನದ ಹೆಳವ (ಹೇಳುವವ) ತಮ್ಮಣ್ಣ ಯಲ್ಲಪ್ಪ ಚಣಬತ್ತಿ. ಅವನು ಕಳೆದ ೨೫ – ೩೦ ವರ್ಷಗಳಿಂದ ಪ್ರತಿ ವರ್ಷ ನನ್ನಲ್ಲಿ ಬಂದು ಹೋಗುತ್ತಾನೆ. ಮೊದಲು ಗೋಕಾಕ ಹತ್ತಿರದ ಹುಲಿಕಟ್ಟಿಯಲ್ಲಿದ್ದ. ನಂತರ ಸೊಗಲದ ಹತ್ತಿರದ ಕಾರಲಕಟ್ಟಿಯಲ್ಲಿ ವಾಸಿಸಿರಬೇಕು. ಈಗ ಕೆಲವು ವರ್ಷಗಳಿಂದ ಕಲಘಟಗಿ ತಾಲೂಕಿನ ಹಸರಂಬಿ – ಹುಲಕೊಪ್ಪ ಹತ್ತಿರ ಆರೇಬಸನಕೊಪ್ಪದಲ್ಲಿ ನೆಲೆಸಿದ್ದಾನೆ. ಈಗ ಅವನಿಗೆ ಅಜಮಾಸು ೮೦ – ೮೨ ರ ವಯಸ್ಸು. ಅವನ ಚೋಪಡಿ ಪುಸ್ತಕದಲ್ಲಿ ನಮ್ಮ ಮನೆತನದ ಸ್ವಲ್ಪ ಇತಿಹಾಸ, ಮೂಲಪುರುಷರ ಹೆಸರುಗಳು ಸಿಗುತ್ತವೆ. ಅದರ ಪ್ರಕಾರ,

ಕಲಘಟಗಿಯ ಹಿರೇಮಠದ ಕರಿಬಸಯ್ಯಸ್ವಾಮಿ ನಮ್ಮ ಮನೆತನದ ಗುರುಗಳು. ಕರಿಸಿದ್ಧಸ್ವಾಮಿ ಎಂತಲೂ ಒಮ್ಮೆ ಹೇಳಿದ್ದಾನೆ. ಮನೆದೇವರು ಶ್ರೀಶೈಲದ ಪರ್ವತಮಲ್ಲಯ್ಯ. ಮೊದಲು ಇಂಡಿ – ಯಳಮಲಿಗಳಲ್ಲಿ ಗೌಡಕಿ ಮಾಡಿದ ಮನೆತನ. ದೊಡ್ಡಮಲ್ಲಪ್ಪ, ಪರಪ್ಪಶೆಟ್ಟರು, ಗುರುಸಿದ್ಧಪ್ಪ ಮುಂತಾದವರು ಮೂಲಪುರುಷರು. ಇವನ ಪಟ್ಟಿಯ ಪ್ರಕಾರ ಪ್ರಸಕ್ತ ಪಟ್ಟಣಶೆಟ್ಟಿ ಮನೆತನದಲ್ಲಿ ನನ್ನ ತಂದೆ ಬಸಪ್ಪ ಹದಿಮೂರನೆಯವನು. ನಾನು ಹದಿನಾಲ್ಕನೆಯವನು.

**91.** ಆತ್ಮಕಥೆಯು ಏನು ಮಾಡುತ್ತದೆ ?

(1) ಕೆಲವರನ್ನು ವ್ಯಂಗ್ಯ ಮಾಡುತ್ತದೆ

(2) ಕೆಲವರನ್ನು ಅಳಿಸುತ್ತದೆ

(3) ಕೆಲವರನ್ನು ನೋಯಿಸುತ್ತದೆ

(4) ಕೆಲವರನ್ನು ಸಂತೋಷಗೊಳಿಸುತ್ತದೆ

**92.** ಅಲಗು ಹೊಂದಿದ ಖಡ್ಗದ ಮೇಲೆ ನಡೆದಂತೆ ಅಂದರೆ ಏನು ?

(1) ಕಷ್ಟದ ಕೆಲಸ

(2) ಸಾಯಿಸುವಂಥ ಕೆಲಸ

(3) ಅಪಾಯದ ಕೆಲಸ

(4) ಎಚ್ಚರಿಕೆಯ ನಡಿಗೆ

**93.** ಆತ್ಮಕಥನವನ್ನು ಹೇಳುವಾಗ ಏನನ್ನು ದಾಟಬೇಕು ?

(1) ಆತ್ಮ ಪರೀಕ್ಷೆ

(2) ಸ್ವ ಹೊಗಳಿಕೆ

(3) ಅತಿ ಮರುಕುತನ

(4) ಬಯ್ಯುವುದು

**94.** ಒಳ್ಳೆಯ ಆತ್ಮಕಥೆಗೆ ಏನಾಗಿ ಉಳಿಯುವ ಯೋಗ್ಯತೆ ಇದೆ ?

(1) ಸಾಹಿತ್ಯ, ಇತಿಹಾಸ

(2) ಸುಂದರವಾದ ಸಾಹಿತ್ಯ

(3) ಇತಿಹಾಸ

(4) ವೈಯಕ್ತಿಕವಾದ ವಿವರ

**95.** 'ನಿಶ್ಚಿತ' ಪದದ ಅರ್ಥವೇನು ?

(1) ಹೊಂದುವುದು

(2) ಭರವಸೆ

(3) ಅಂತಿಮ

(4) ಖಚಿತ

**96.** 'ಬಸನಕೊಪ್ಪದಲ್ಲಿ' ಇಲ್ಲಿರುವ ವಿಭಕ್ತಿ ಯಾವುದು ?

(1) ಚತುರ್ಥಿ

(2) ಸಪ್ತಮಿ

(3) ದ್ವಿತಿಯ

(4) ತೃತೀಯ

**97.** ಲೇಖಕನು ಆತ್ಮಕಥನದ ಬರವಣಿಗೆಯ ಸ್ವರೂಪವನ್ನು ಯಾವುದಕ್ಕೆ ಹೋಲಿಸಿದ್ದಾನೆ ?

(1) ಅಲೆಗಳಿಂದ ಕೂಡಿದ ಸಮುದ್ರಕ್ಕೆ

(2) ಗಂಭೀರವಾದ ಸಮುದ್ರಕ್ಕೆ

(3) ಹೊಯ್ದಾಡುತ್ತಿರುವ ಸಮುದ್ರಕ್ಕೆ

(4) ಕಷ್ಟಕೊಡುತ್ತಿರುವ ಸಮುದ್ರ ನೀರಿನ ಹೊಡೆತಕ್ಕೆ

**98.** ಬರವಣಿಗೆ ಎಂದರೇನು ?

(1) ನಮ್ಮನ್ನೇ ನಾವು ಹೇಳಿಕೊಳ್ಳುವುದು

(2) ಸತತವಾಗಿ ನಮ್ಮೊಳಗಿನದನ್ನು ಹೇಳುವ ಕೆಲಸ

(3) ನಮ್ಮನ್ನು ಲೋಕಕ್ಕೆ ತೋರಿಸುವುದು

(4) ಆತ್ಮಾನಂದದ ಅಭಿವ್ಯಕ್ತಿ

**99.** ಆತ್ಮಕಥೆ ಎಂದರೆ

(1) ನಮ್ಮನ್ನು ಒಳಗಿನಿಂದ ಬಿಚ್ಚಿಡುವ ವಿಧಾನ

(2) ಸುರಕ್ಷಿತವಾಗಿ ನಮ್ಮನ್ನು ಇಟ್ಟುಕೊಳ್ಳುವ ವಿಧಾನ

(3) ವೈಯಕ್ತಿಕವಾದದ್ದನ್ನು ಹೇಳುವ ವಿಧಾನ

(4) ಆತ್ಮದೊಳಗಿನ ನಿಗೂಢ ಕಥನ

ನಿರ್ದೇಶನ : ಈ ಕೆಳಗಿನ ಕವನವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆಸಂಖ್ಯೆ: **100-105**) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ :

ದುಂಡುಮೇಜಿನ ಸುತ್ತ
ದುಂಡು ದುಂಡು ಮಂದಿ,

ದುಂಡು ದುಂಡು ಮಂದಿಗೆ
ಬಂಡೀಗಾಲೀ ಹೊಟ್ಟೆ

ಬಂಡೀಗಾಲೀ ಹೊಟ್ಟೆಗೆ
ಗುಂಡುಕಲ್ಲ ತಲೆಯು,

ಗುಂಡುಕಲ್ಲ ತಲೆಗೆ
ಸೊನ್ನೆ ಸುತ್ತಿದ ಮಿದುಳು

ಸೊನ್ನೆ ಸುತ್ತಿದ ಮಿದುಳಿಗೆ
ಪೂಜಿ, ಪೂಜಿ ಫಲವು,

ಪೂಜಿ, ಪೂಜಿ ಫಲದೊಳಗೆ
ಚಕ್ರಗೋಷ್ಠಿ ಗೊರಟ

ಚಕ್ರಗೋಷ್ಠಿ ಗೊರಟಕ್ಕೆ
ವಕ್ರ ಶನಿ ನೋಟ,

ಬೆಳ್ಳನ್ನವರಿಗಾಟ –
ಕಪ್ಪನ್ನವರಿಗೆ ಕಾಟ –

ತಂತಮ್ಮನೆಗೋಟ –
ಮುದುಕನದಿದು ಬ್ಯಾಟ !

**100.** 'ಮಂದಿ' ಪದದ ಅರ್ಥವೇನು ?

(1) ಗುಂಪು
(2) ಪ್ರಾಣಿ
(3) ಹಂದಿಯ ತದ್ಭವ
(4) ಜನ

**101.** 'ಗೊರಟಕ್ಕೆ' – ಇಲ್ಲಿರುವ ವಿಭಕ್ತಿ ಯಾವುದು ?

(1) ಸಪ್ತಮಿ
(2) ದ್ವಿತಿಯಾ
(3) ಚತುರ್ಥಿ
(4) ತೃತಿಯಾ

**102.** 'ಬೆಳ್ಳನ್ನವರಿಗಾಟ ಕಪ್ಪನ್ನವರಿಗೆ ಕಾಟ' – ಕವನದ ಸಂದರ್ಭದಲ್ಲಿ ಹೀಗಂದರೇನು ?

(1) ಬ್ರಿಟೀಷರಿಗೆ ಮೋಜು; ಭಾರತೀಯರಿಗೆ ಗೋಳು
(2) ಬಿಳಿಯ ಬಣ್ಣಕ್ಕೆ ಆಟ; ಕಪ್ಪು ಬಣ್ಣಕ್ಕೆ ಕಷ್ಟ
(3) ಬಿಳಿಯರಿಗೆ ಆನಂದ; ಆಫ್ರಿಕಾದ ಕಪ್ಪು ಜನರಿಗೆ ಕಾಟ
(4) ಶ್ರೀಮಂತರಿಗೆ ವಿನೋದ; ಬಡವರಿಗೆ ಕಾಟ

**103.** ಈ ಕವನದಲ್ಲಿ ಕೊನೆಗೆ ಬರುವ 'ಮುದುಕ' ಯಾರು ?

(1) ದೇವರು
(2) ವಯಸ್ಸಾದ ಯೋಗಿ
(3) ಗಾಂಧೀಜಿ
(4) ಬೇಟೆಯಾಡುವ ಹಿರಿಯ

**104.** ಮಿದುಳಿಗೆ ಏನಾಗಿದೆ ?

(1) ಸೊನ್ನೆಯ ಲಾಭವಾಗಿದೆ
(2) ಪೂಜೆಯ ಲಾಭವಾಗಿದೆ
(3) ಫಲವತ್ತಾದ ಪೂಜೆಯಾಗಿದೆ
(4) ಹಣ್ಣುಗಳಿಂದ ಶಕ್ತಿ ಬಂದಿದೆ

**105.** 'ದುಂಡು ದುಂಡು' – ಅಂದರೆ ಏನು ?

(1) ಗುಂಡಗೆ ಇರುವುದು
(2) ತಿಂದು ಕೊಬ್ಬಿರುವುದು
(3) ದಂಡಕ್ಕೆ ಕಾರಣವಾಗಿರುವುದು
(4) ಬಹಳ ತುಂಬಿಕೊಂಡಿರುವುದು

ನಿರ್ದೇಶನ : ಈ ಕೆಳಗಿನ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.

**106.** ಪ್ರತಿಯೊಂದು ಭಾಷೆಗೂ ಅದರದೇ ಆದ ವ್ಯಾಕರಣವಿರುತ್ತದೆ ಮತ್ತು ಅದು

(1) ನಿಯಮಬದ್ಧವಾಗಿರುತ್ತದೆ

(2) ರಾಜ್ಯಾಡಳಿತಕ್ಕೆ ಒಳಪಟ್ಟಿರುತ್ತದೆ

(3) ಕೇಂದ್ರದ ಆಡಳಿತಕ್ಕೆ ಒಳಪಟ್ಟಿರುತ್ತದೆ

(4) ಲಿಪಿ ಆಧಾರಿತವಾಗಿರುತ್ತದೆ

**107.** ತ್ರಿಭಾಷಾ ಸೂತ್ರದನ್ವಯ ಮೂರನೆಯ ಭಾಷೆಯು ______

(1) ದೇಶದಲ್ಲೆಲ್ಲ ಒಂದೇ ಥರ ಇರುತ್ತದೆ.

(2) ಸಂಸ್ಕೃತ ಮಾತ್ರ.

(3) ಹಿಂದಿ ಭಾಷಿಕ ರಾಜ್ಯ ಹಾಗೂ ಹಿಂದಿಯೇತರ ಭಾಷಿಕ ರಾಜ್ಯಗಳಲ್ಲಿ ಭಿನ್ನವಾಗಿರುತ್ತದೆ.

(4) ಯಾವುದಾದರೂ ವಿದೇಶೀಯ ಭಾಷೆ ಮಾತ್ರ.

**108.** ಅಧ್ಯಾಪಿಕೆಯು 'ಮಗಳನ್ನು ಉಳಿಸಿ, ಮತ್ತು ಮಗಳನ್ನು ಓದಿಸಿ' ಎನ್ನುವ ಪೋಸ್ಟರ್ ಅನ್ನು ಕ್ಲಾಸಿನಲ್ಲಿ ತಂದು ಗೋಡೆಗೆ ಅಂಟಿಸುತ್ತಾಳೆ. ವಿದ್ಯಾರ್ಥಿಗಳಿಗೆ ಅದನ್ನು ಜಾಗರೂಕತೆಯಿಂದ ನೋಡಲು ಮತ್ತು ಅದರ ಬಗ್ಗೆ ಚಿಕ್ಕ ಪ್ಯಾರಾ ಬರೆಯಲು ಹೇಳುತ್ತಾಳೆ. ಇಲ್ಲಿ ಭಾಷಾ ಅಧ್ಯಾಪಿಕೆಯು ಬಳಸಿದ ಪೋಸ್ಟರ್

(1) ಒಂದು ಅಥೆಂಟಿಕ್ ಸಾಮಗ್ರಿ, (Authentic)

(2) ಸುಸಂಘಟಿತವಾದ ಸಾಮಗ್ರಿ, (Integrated)

(3) ಮಾನ್ಯತೆ ಪಡೆದ ಸಾಮಗ್ರಿ, (Valid)

(4) ಪ್ರಯೋಜನಕ್ಕೆ ಬಾರದ ಸಾಮಗ್ರಿ

**109.** 'ನಿರರ್ಗಳತೆ' ಅಂದರೆ ________

(1) ತಪ್ಪಿಲ್ಲದಂತೆ ಬರೆಯುವುದು

(2) ವ್ಯಾಕರಣದ ನಿಯಮಗಳನ್ನು ಸ್ಪಷ್ಟವಾಗಿ ವಿವರಿಸುವುದು ಮತ್ತು ಬಳಸುವುದು

(3) ವಾಕ್ಯವನ್ನು ಸರಿಯಾಗಿ ಉಚ್ಚರಿಸುವುದು

(4) ತನ್ನನ್ನೇ ಅಭಿವ್ಯಕ್ತಿಸುವಂತೆ, ಮನೋಹರವಾಗಿ ಮಾತನಾಡುವುದು, ಓದುವುದು ಮತ್ತು ಬರೆಯುವುದು.

**110.** ಓದುವ 'ಬಾಟಮ್ ಅಪ್' ವಿಧಾನವು ಇದರ ಮೇಲೆ ಕೇಂದ್ರೀಕರಿಸುತ್ತದೆ :

(a) ಧ್ವನಿ

(b) ಅಕ್ಷರ

(c) ವಾಕ್ಯ

(d) ಪದ

(e) ವರ್ಣ

(1) a d e b c

(2) a b c d e

(3) a e b d c

(4) b c a e d

**111.** ಈ ಕೆಳಗಿನವುಗಳಲ್ಲಿ ಯಾವುದು ಭಾಷೆಯ ಗಳಿಕೆಯ 'ಸಾಮಾಜಿಕ ಅಂತರ್ ಸಂವಹನ' ಥಿಯರಿಗಳ ನಂಬಿಕೆಯ ಮೇಲೆ ಆಧಾರಿತವಾಗಿದೆ ?

(1) ಭಾಷಾ ಕಲಿಕೆಗಾರರನ್ನು ಅರ್ಥಸಾಧ್ಯತೆಗಳ ಒಳಗೊಳ್ಳುವಿಕೆಗೆ ತೆರೆದುಕೊಳ್ಳುವಂತೆ ಮಾಡಬೇಕು. ಅಂದರೆ ಇದು ಸ್ವಲ್ಪಮಟ್ಟಿನ ಕಷ್ಟಸಾಧ್ಯತೆಯ ಮಟ್ಟದ್ದು ಆಗಿರಬೇಕು.

(2) ಭಾಷಾ ಕಲಿಕೆಯು ಸಾಧ್ಯವಾಗುವುದು ಭಾಷಾಕಲಿಕೆಯನ್ನು ಪಠ್ಯಕ್ರಮದ ಆಚೆಗೆ ಕೇಂದ್ರೀಕರಿಸಿದಾಗ

(3) ಕಲಿಯುವವರಿಗೆ ಅನುಕರಣೆಯ ಅವಕಾಶ ಹಾಗೂ ಒತ್ತಾಯಗಳು ಇದ್ದಾಗ ಮಾತ್ರ ಭಾಷಾ ಕಲಿಕೆಯನ್ನು ಮಾಡಬಹುದಾಗಿದೆ

(4) ಭಾಷಾ ಕಲಿಕೆದಾರರು ಉಳಿದವರ ಜೊತೆಗೆ ಚರ್ಚಿಸಲು ಮತ್ತು ಅರ್ಥವನ್ನು ಅನ್ವಯಗೊಳಿಸಲು ಅವಕಾಶ ಸಿಗಬೇಕು.

**112.** 'ಗುಣಾರೋಪಣ' (Predication) ಒಂದು ಉಪಕೌಶಲ್ಯವಾಗಿ ಈ ಕೆಳಗಿನ ಕ್ರಿಯೆಯೊಂದಿಗೆ ಸಹಭಾಗಿತ್ವವನ್ನು ಹೊಂದಿದೆ :

(1) ಡ್ರಾಫ್ಟ್ ಮಾಡುವುದು

(2) ಸಂಗ್ರಹಿಸುವುದು

(3) ಟಿಪ್ಪಣಿ ಮಾಡಿಕೊಳ್ಳುವುದು

(4) ಓದುವುದು

**113.** ವಿದ್ಯಾರ್ಥಿಗಳು ಒಳ್ಳೆಯ ಕೆಲಸದ ಅವಕಾಶಗಳು ಸಿಗಲೆಂದು ಭಾಷೆಯನ್ನು ಕಲಿಯಲು ಹೊರಟರೆ ಅವರ ಭಾಷಾ ಕಲಿಕೆಯ ಉದ್ದೇಶವನ್ನು ಹೀಗೆ ವಿವರಿಸಬಹುದು :

(1) ಅಂತರ್ಗತ (Intrinsic), ಪ್ರಧಾನವಾದ

(2) ಅಪ್ರಧಾನವಾದ (Extrinsic)

(3) ಕೆಲಸದ ಉದ್ದೇಶ ಕೇಂದ್ರಿತ

(4) ಅಹಂಕಾರ ಕೇಂದ್ರಿತ

**114.** ಪರಿಣಾಮಕಾರಿಯಾದ ಭಾಷಾ ತರಗತಿಯ ಲಕ್ಷಣವು ಕಲಿಯುವವರಿಗೆ ________ ಅವಕಾಶವನ್ನು ಒದಗಿಸುವುದೇ ಆಗಿದೆ.

(1) ಮೌಲ್ಯಮಾಪನದ

(2) ಅನುಕರಣೆಯ

(3) ಅಂತರ್ ಸಂವಹನದ (Interact)

(4) ಅತ್ಯಂತ ಕಡಿಮೆ ತಪ್ಪುಗಳನ್ನು ಮಾಡುವುದರ

**115.** ಎಲ್ಲರನ್ನು ಒಳಗೊಂಡ (Inclusive) ತರಗತಿಯಲ್ಲಿ ಕಲಿಸುವಾಗ ಭಾಷಾ ಅಧ್ಯಾಪಿಕೆಯು

(1) ಪ್ರತಿಭಾವಂತ ವಿದ್ಯಾರ್ಥಿಗಳು ಜಾಣರಲ್ಲದ ವಿದ್ಯಾರ್ಥಿಗಳ ಕಡೆಗೆ ಗಮನವಹಿಸಲು ಹೇಳಬೇಕು.

(2) ವಿಭಿನ್ನ ಕಲಿಯುವಿಕೆಯ ಶೈಲಿಗಳನ್ನು ಬಳಸಿ ಅವರನ್ನು ಕಲಿಯುವ ಪ್ರಕ್ರಿಯೆಯಲ್ಲಿ ತೊಡಗಲು ಪ್ರೋತ್ಸಾಹಿಸಬೇಕು.

(3) ವಿದ್ಯಾರ್ಥಿಗಳನ್ನು ಸಂಬಾಳಿಸಲು ವಿಶೇಷ ಕಲಿಸುವವನೊಬ್ಬನನ್ನು ನೇಮಿಸುವಂತೆ, ಪ್ರಾಂಶುಪಾಲರನ್ನು ಕೇಳಬೇಕು.

(4) ಕಲಿಯುವ ವಿದ್ಯಾರ್ಥಿಗಳು ಶಾಂತಚಿತ್ತರಾಗಿ ಶಾಲೆಯ ಆರು ಘಂಟೆಯ ಅವಧಿಯನ್ನು ಕಳೆಯುವಂತೆ ನೋಡಿಕೊಳ್ಳಬೇಕು.

**116.** ಭಾಷಾ ಪ್ರೌಢಿಮೆಯನ್ನು ಸಾಧ್ಯವಾಗಿಸಿಕೊಳ್ಳಲು ಈ ಕೆಳಗಿನವುಗಳಲ್ಲಿ ಯಾವುದು ಮುಖ್ಯ ಕಾರಣವಾಗಿವೆ ?

(1) ಸರಿಯಾದ ಉಚ್ಚಾರಣೆಯಿಂದ ಓದುವುದು

(2) ಪಠ್ಯಪುಸ್ತಕದಲ್ಲಿನ ಅಧ್ಯಾಯಗಳ ಕೊನೆಗೆ ಕೊಟ್ಟ ಪಠ್ಯ ಕುರಿತು ಅಭ್ಯಾಸಗಳನ್ನು ಮಾಡುವುದು.

(3) ನಿಖರತೆ ಮತ್ತು ನಿರರ್ಗಳತೆಯನ್ನು ಬೆಳೆಸಿಕೊಳ್ಳುವುದು.

(4) ಕಡಿಮೆ ಬೆಲೆಯ ಅಥವಾ ಲೋಹವಲ್ಲದ ಬೋಧನಾ ಸಾಮಗ್ರಿಗನ್ನು ಬಳಸುವುದು.

**117.** ಪರಿಣಾಮಕಾರಿಯಾದ ಭಾಷಾ ಅಧ್ಯಾಪಿಕೆಯು

(1) ಅಧ್ಯಾಪಿಕೆಯ ಮಾತಿನ ಕಾಲವನ್ನು ಹೆಚ್ಚುಗೊಳಿಸುವುದು.

(2) ವಿದ್ಯಾರ್ಥಿಗಳ ಮಾತಿನ ಕಾಲವನ್ನು ಹೆಚ್ಚುಗೊಳಿಸುವುದು.

(3) ವಿದ್ಯಾರ್ಥಿಗಳ ಮಾತಿನ ಕಾಲವನ್ನು ಕಡಿಮೆ ಮಾಡುವುದು.

(4) ಸಮೂಹ ಮತ್ತು ಜೋಡಿಯಲ್ಲಿನ ಕೆಲಸವನ್ನು ಕಡಿಮೆ ಮಾಡುವುದು.

**118.** ಮುದ್ರಣ ಶ್ರೀಮಂತಿಕೆಯ ವಾತಾವರಣವು ______ ಮತ್ತು ______ ಕಲಿಕೆಯ ಸಂಘಟಿತ ಭಾಗವಾಗಿದೆ.

(1) ಶಾಲೆಯ, ತರಗತಿಯ

(2) ಓದುವ, ವೈಯಕ್ತಿಕ

(3) ಸಾಕ್ಷರತೆ, ಭಾಷೆಯ

(4) ವೈಯಕ್ತಿಕ, ಜೋಡಿಸುವ (peer)

**119.** 'ಒಂದು ಸಂಪನ್ಮೂಲವಾಗಿ ಬಹು ಭಾಷಿಕತೆ' – ಅಂದರೆ ______

(1) ಬಹಳ ಭಾಷೆಗಳನ್ನು ಕಲಿಯುವುದು

(2) ಮಗುವಿನ ಭಾಷೆಯಲ್ಲಿ ಪ್ರತಿಯೊಂದೂ ಪದದ ಸಮಾನ ರೂಪವನ್ನು ಕೊಡುವುದು

(3) ಪಠ್ಯಕ್ರಮವನ್ನು ಮೀರಿ ಭಾಷೆಯನ್ನು ಕಲಿಸುವುದು

(4) ಕಲಿಯುವವರ ಭಾಷೆಗಳನ್ನು ಒಂದು ಉಪಾಯ (strategy) ವಾಗಿ ಬಳಸುವುದು

**120.** ನಿಮ್ಮ ಕ್ಲಾಸಿನಲ್ಲಿ ಅಂಕಿತ್ ಎನ್ನುವ ದೃಷ್ಟಿಮಾಂದ್ಯ ವಿದ್ಯಾರ್ಥಿ ಇದ್ದಾನೆ. ಭಾಷಾ ಅಧ್ಯಾಪಿಕೆಯಾಗಿ ನೀವು ________

(1) ಅಭ್ಯಾಸಕ್ಕಾಗಿ ವಿವಿಧ ಬಗೆಯ ಕಾರ್ಯಚಟುವಟಿಕೆಯ ಶೀಟ್‌ಗಳನ್ನು ಕೊಡುವುದರ ಕಡೆಗೆ ಗಮನ ಹರಿಸುತ್ತೀರಿ.

(2) ನಿಮ್ಮ ಕಲಿಸುವಿಕೆಯಲ್ಲಿ ಅನೇಕ ಬಗೆಯ ದೃಶ್ಯ ಸಾಧನಗಳನ್ನು ಉಪಯೋಗಿಸುತ್ತೀರಿ

(3) ಅನೇಕ ಬಗೆಯ ಹಾವ ಭಾವ ಹಾಗೂ ದೈಹಿಕ ಭಾಷೆಯನ್ನು ಪ್ರಯೋಗಿಸುತ್ತೀರಿ.

(4) ಸ್ವರಶೈಲಿಯ ಬಳಕೆ ಹಾಗೂ ತಡೆದು ಸ್ಪಷ್ಟವಾಗಿ ಮಾತನಾಡುವುದು ಮತ್ತು ಸ್ಪರ್ಶಿಸುವ ಹಾಗೂ ಅನುಭವಿಸುವ ಸಾಮಗ್ರಿಗಳನ್ನು ಬಳಸುವುದನ್ನು ಮಾಡುತ್ತೀರಿ.

ಅಭ್ಯರ್ಥಿಗಳು ಕನ್ನಡವನ್ನು ಭಾಷೆ-**II** ಎಂದು ಆರಿಸಿಕೊಂಡಿದ್ದರೆ ಮಾತ್ರ ಭಾಗ-**V** ರಲ್ಲಿರುವ ಪ್ರಶ್ನೆಗಳನ್ನು **(**ಪ್ರಶ್ನೆಸಂಖ್ಯೆ **121 - 150)** ಉತ್ತರಿಸಬೇಕು.

Candidates should attempt the questions from **Part-V (Q.No. 121-150)**, if they have opted **KANNADA** as **Language-II** only.

## ಭಾಗ – V

## ಭಾಷೆ – II

## ಕನ್ನಡ

**ಅಭ್ಯರ್ಥಿಗಳು ಕನ್ನಡವನ್ನು ಭಾಷೆ-II ಎಂದು ಆರಿಸಿಕೊಂಡಿದ್ದರೆ ಮಾತ್ರ ಭಾಗ-V ರಲ್ಲಿರುವ ಪ್ರಶ್ನೆಗಳನ್ನು (ಪ್ರಶ್ನೆಸಂಖ್ಯೆ 121 - 150) ಉತ್ತರಿಸಬೇಕು.**

**ನಿರ್ದೇಶನ : ಈ ಕೆಳಗಿನ ಲೇಖನದ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆಸಂಖ್ಯೆ 121 - 128) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ :**

ಶಿವರಾಮ ಕಾರಂತರ 'ಚೋಮನ ದುಡಿ' ಎಂಬತ್ನಾಲ್ಕು ವರ್ಷಗಳ ಹಿಂದೆ ೧೯೩೭ ರಲ್ಲಿ ಪ್ರಕಟವಾದ ಕನ್ನಡದ ಮಹತ್ವದ ಕಾದಂಬರಿಯಾಗಿದೆ. 'ಚೋಮನ ದುಡಿ' ಯ ವಿಶಿಷ್ಟತೆಗೆ ಹಲವು ಕಾರಣಗಳಿವೆ. ಅದು ಕನ್ನಡದಲ್ಲಿ ದಲಿತ ಲೋಕದ ಅನುಭವವನ್ನು ಕಟ್ಟಿ ಕೊಡುವ ಮೊದಲ ಕಾದಂಬರಿಯಾಗಿದೆ. ಆದ್ದರಿಂದಲೇ ಅದಕ್ಕೆ ಸಮಕಾಲೀನ ಪ್ರಸ್ತುತತೆ ಇದೆ. ಕನ್ನಡದಲ್ಲಿ ಪ್ರಖರ ವಾಸ್ತವವಾದದ ಅಭಿವ್ಯಕ್ತಿ 'ಚೋಮನ ದುಡಿ' ಯಲ್ಲಿ ಮೂರ್ತಸ್ವರೂಪ ಪಡೆದಿದೆ. ಬ್ರಿಟಿಶ್ ವಸಾಹತುಶಾಹಿ ಕಾಲಘಟ್ಟದಲ್ಲಿ ರಚಿತವಾದ 'ಚೋಮನ ದುಡಿ' ಊಳಿಗಮಾನ್ಯ ವ್ಯವಸ್ಥೆಯನ್ನೂ, ವಸಾಹತುಶಾಹಿಯನ್ನು ವಿರೋಧಿಸುತ್ತದೆ. ಚೋಮನ ಕಥೆಯ ಮೂಲಕ ದಲಿತ ವರ್ಗದ ನೋವು, ಅಸಹಾಯಕತೆ, ಸಂಕಟ, ಪ್ರತಿಭಟನೆ, ಯಾತನೆಯನ್ನು ಪ್ರತಿಮಿಸುವ ಸಮುದಾಯದ ಸಂಕಥನವೂ ಆಗಿದೆ.

ಚೋಮ ಜೀವಮಾನ ಪರ್ಯಂತ ಬಡತನ, ನೋವು, ನಿರಾಶೆ, ಅನುಭವಿಸಿದವನು. ಅವನ ಜೀವನ ಕಣ್ಣೀರಿನ ಕಡಲು. ದುಃಖವನ್ನು ಮರೆಯಲು ಅವನಿಗಿರುವ ಏಕೈಕ ಸಾಧನವೆಂದರೆ 'ದುಡಿ' ಬಾರಿಸುವುದು. ಅದರಿಂದಾಗಿಯೇ ಅವನು ಸಂತೋಷವನ್ನೂ ಅನುಭವಿಸುತ್ತಾನೆ. ಮನಸ್ಸಿನ ಭಾವನೆಗಳ ಅಭಿವ್ಯಕ್ತಿಗೆ ಅದೊಂದೇ ಆಧಾರ. ಎರಡು ಹೊತ್ತು ಗಂಜಿ ಉಂಡು ಸಂಜೆ ಬಿರುಮ ಪೂಜಾರಿಯ ಕಳ್ಳಿನಂಗಡಿಯ ಒಂದೆರಡು ಸೀಸೆ ಬೆರೆತ ಹೆಂಡ ಕುಡಿಯದಿದ್ದರೆ ಜೀವವೇ ಉಳಿಯದೆಂಬ ನಂಬಿಕೆ ಚೋಮನದು. ಚೋಮ ದಟ್ಟ ದಾರಿದ್ರ್ಯದಲ್ಲಿ ಇರುವವನು. ಅವನು ಸಮಾಜದ ಹಿಂದುಳಿದ ಅಸ್ಪೃಶ್ಯ ವರ್ಗಕ್ಕೆ ಸೇರಿದ್ದರೂ ತನ್ನದೇ ಆದ ಭೂಮಿಯಲ್ಲಿ ಕೃಷಿಕನಾಗಬೇಕೆಂಬ ಮಹದಾಸೆ ಹೊಂದಿದವನು. ಅದರ ವಿಫಲತೆಯ ಕಥೆಯೇ 'ಚೋಮನ ದುಡಿ' ಕಾದಂಬರಿಯ ವಸ್ತು.

'ಚೋಮನ ದುಡಿ' ಕಾದಂಬರಿಯ ಆರಂಭವೇ ಅತ್ಯಂತ ರೋಚಕವಾದದ್ದು. ಕತ್ತಲೆಂದರೆ ಕತ್ತಲಿನ ಒಂದು ರಾತ್ರಿ ಭೋಗಾನ ಹಳ್ಳಿಯ ನಿವಾಸಿಗಳು ಜಾತ್ರೆಯಿಂದ ನಿದ್ದೆಗಣ್ಣಿನಲ್ಲಿ ಮರಳುತ್ತಿರುವಾಗ ಒಮ್ಮಿಂದೊಮ್ಮೆಗೇ ಈ ಗೂಢ ನೀರವವನ್ನು ಹರಿದು ಚೂರಾಗಿಸುವ ಒಂದು ವಿಚಿತ್ರ ಧ್ವನಿ ಕೇಳಿಸುತ್ತದೆ. ಒಮ್ಮೆ ಈ ಸ್ವರಗಳ ಆವೇಗ ಧಾವಿಸಿ ಪ್ರಾಣ ಬಿಡಲಿರುವ ಎದೆಯ ಮಿಡಿತಗಳಂತೆ ಕೇಳುತ್ತದೆ. ಕೆಲವು ಬಾರಿ ಅದು ಮಂದಗತಿಯಿಂದ ಸರಿಯುವಾಗ, ಚಂಬಗುಟಿಗನೊಬ್ಬನ ಲಯಬದ್ಧವಾದ ಸುತ್ತಿಗೆಯ ಏಟುಗಳಂತೆ ಕೇಳಿಸುತ್ತದೆ. ಮರುಧ್ವನಿಯೊಂದಿಗೆ ಅದು ಮುರಿದು ಬಿದ್ದರೆ, ಪ್ರಳಯಕ್ಕೆ ಒಂದು ಗಳಿಗೆಯೂ ಉಳಿದಿಲ್ಲವೆನಿಸುತ್ತದೆ. ಅದು ಬರಿಯ ಸದ್ದಿನಂತಲ್ಲ. ಯಾಂತ್ರಿಕವಾಗಿ, ಕೇವಲ ಜಡ ಪ್ರಪಂಚದ ನಿಯಮಕ್ಕೆ ಆಳಾಗಿ ನಲಿಯುವ ಸದ್ದಾಗಿರುವುದು. ಅದು ಜಡವಾದುದೇನೂ ನಿಜ. ಅದರ ಹಿಂದೆ ಧ್ವನಿಯನ್ನು ಮೊಳಗಿಸುವ ಒಂದು ಅದ್ಭುತ ಶಕ್ತಿಯೇ ಇರುವಂತೆ ಕಾಣುತ್ತಿದೆ. ಅದೇ ಚೋಮನ ದುಡಿಯ ವಿಶಿಷ್ಟತೆ. ಚೋಮನ ಬಾಳಿನ ಕರಾಳ ಮುಖವನ್ನು ಅರ್ಥಪೂರ್ಣವಾಗಿ ಧ್ವನಿಸುವ ದುಡಿಯ ಬಡಿತ ಕಾದಂಬರಿಯುದ್ದಕ್ಕೂ ವ್ಯಾಪಿಸಿದೆ.

**121.** ಚೋಮನದುಡಿ ಕಾದಂಬರಿಯನ್ನು ಯಾವ ಪ್ರಕಾರಕ್ಕೆ ಸೇರಿಸಬಹುದು ?

(1) ವಾಸ್ತವವಾದದ ಬರವಣಿಗೆ

(2) ಭಾವನಾತ್ಮಕ ಬರವಣಿಗೆ

(3) ಆಧುನಿಕ ನವ್ಯ ಬರವಣಿಗೆ

(4) ಸಾಂಕೇತಿಕ ಬರವಣಿಗೆ

**122.** ಚೋಮನು 'ದುಡಿ' ಬಾರಿಸುವುದು ಏಕೆ ?

(1) ಬಡತನದಿಂದ ಬೇರೆ ವಾದ್ಯ ಸಿಗದ ಕಾರಣ

(2) ನಿರಾಶೆಯನ್ನು ತೋಡಿಕೊಳ್ಳಲು

(3) ತನ್ನ ಜೀವನದ ಸ್ಥಿತಿಯಿಂದ ದುಃಖ ಮರೆತು ಬಿಡಲು

(4) ತನ್ನ ಜೀವತ್ವದ ಗೋಳನ್ನು ಹೇಳಲು

**123.** 'ಅಸ್ಪೃಶ್ಯ' ಎಂದರೆ ಏನು ಅರ್ಥ

(1) ಕಾಣಿಸದೇ ಇರುವ

(2) ಮುಟ್ಟಿಸಿಕೊಳ್ಳುವ

(3) ಸ್ಪರ್ಶತೆಗಾಗಿ ಕಾಯುತ್ತಿರುವ

(4) ಸ್ಪರ್ಶಿಸಿಕೊಳ್ಳದ

**124.** 'ಜಾತ್ರೆಯಿಂದ' – ಈ ಪದದಲ್ಲಿರುವ ವಿಭಕ್ತಿ ಯಾವುದು ?

(1) ತೃತೀಯ

(2) ಸಪ್ತಮಿ

(3) ದ್ವಿತೀಯ

(4) ಷಷ್ಠಿ

**125.** 'ಚಂಬಗುಟಿಗ' ಪದದಲ್ಲಿರುವ ಸಂಧಿ ಯಾವುದು ?

(1) ಲೋಪಸಂಧಿ

(2) ಆದೇಶಸಂಧಿ

(3) ಸವರ್ಣದೀರ್ಘಸಂಧಿ

(4) ವಕಾರಾಗಮ ಸಂಧಿ

**126.** ಗೂಢ ನೀರವವನ್ನು ಚೂರಾಗಿಸುವ ವಿಚಿತ್ರ ಧ್ವನಿ ಯಾವುದು ?

(1) ಪ್ರಾಣ ಬಿಡಲಿರುವ ಮನುಷ್ಯನ ಧ್ವನಿ

(2) ಜಾತ್ರೆಯಿಂದ ಬರುವಾಗ ರಾತ್ರಿ ಜನರು ಮಾಡುವ ಶಬ್ದ

(3) ದುಡಿಯ ಬಡಿತದ ಸದ್ದು

(4) ಚೋಮನ ರೋದನದ ಧ್ವನಿ

**127.** ಚೋಮನ ಮಕ್ಕಳು ಎಷ್ಟು ?

(1) ನಾಲ್ಕು

(2) ಐದು

(3) ಆರು

(4) ಏಳು

**128.** ಚೋಮನದುಡಿ ಕಾದಂಬರಿ ಯಾಕೆ ವಿಶಿಷ್ಟ ?

(1) ದಲಿತ ಕಥನ ಹೇಳುತ್ತದೆ

(2) ಕೆಳಜಾತಿ ಲೋಕದ ಕಥನ ಹೇಳುವ ಮೊದಲ ಕೃತಿ

(3) ಊಳಿಗಮಾನ್ಯ ವ್ಯವಸ್ಥೆಯನ್ನು ಚಿತ್ರಿಸುತ್ತದೆ

(4) ದಕ್ಷಿಣ ಕನ್ನಡದ ಹಳ್ಳಿಯ ಕಥೆ ಹೇಳುವ ಕೃತಿ

**ನಿರ್ದೇಶನ : ಈ ಕೆಳಗಿನ ಲೇಖನ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆಸಂಖ್ಯೆ : 129 - 135) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ :**

ಕನ್ನಡದ ಹಿರಿಯ ವಿದ್ವಾಂಸರಾದ ಡಾ. ರಂಶ್ರೀ ಮುಗಳಿ ಅವರ ಮಾರ್ಗದರ್ಶನದಲ್ಲಿ 'ಲಕ್ಷ್ಮೀಶದ ಜೈಮಿನಿ ಭಾರತ ಒಂದು ಅಧ್ಯಯನ' ಮಹಾಪ್ರಬಂಧ ರಚಿಸಿ ಪುಣೆ ವಿಶ್ವವಿದ್ಯಾಲಯದಿಂದ ೧೯೬೭ ರಲ್ಲಿ ಪಿ.ಎಚ್.ಡಿ. ಪದವಿ ಪಡೆದ ಡಾ. ವಾಮನ ಬೇಂದ್ರೆ ಅವರು ೧೯೭೭ ರಲ್ಲಿ ತಮ್ಮ ಮಹಾಪ್ರಬಂಧವನ್ನು ಪ್ರಕಟಿಸಿದ್ದಾರೆ. ಮೈಸೂರಿನ ಗೀತಾಬುಕ್ ಹೌಸ್ ಪ್ರಕಟಿಸಿದ ಈ ಮಹಾಪ್ರಬಂಧ ೬೪೪ ಪುಟಗಳ ಬೃಹತ್ ಸ್ವರೂಪವನ್ನು ಪಡೆದಿದೆ. ಡಾ. ವಾಮನ ಬೇಂದ್ರೆಯವರ ಆಳವಾದ ವಿದ್ವತ್ತು, ಸಂಶೋಧನ ನಿಷ್ಠೆ, ವಿದ್ವತ್ಪೂರ್ಣ ವಿಚಾರಗಳ ಮಂಡನೆ, ತೌಲನಿಕ ಅಧ್ಯಯನ, ಬಹುಭಾಷಾ ಪಾಂಡಿತ್ಯ, ವಿಪುಲ ಆಕರಗಳ ಬಳಕೆ ಅರ್ಥಪೂರ್ಣ ವಿಶ್ಲೇಷಣೆಗಳಿಂದ ಈ ಮಹಾಪ್ರಬಂಧ ಮಾದರಿಯ ಅಧ್ಯಯನವಾಗಿದೆ. ಡಾ. ವಾಮನ ಬೇಂದ್ರೆಯವರು ಈ ಮಹಾಪ್ರಬಂಧ ರಚನೆಯಲ್ಲಿ ಮಾಡಿದ ವಿದ್ವತ್ ಸಾಹಸ ವಿದ್ವಾಂಸರ ಮೆಚ್ಚುಗೆಗೆ ಪಾತ್ರವಾಗಿದೆ.

ಡಾ. ವಾಮನ ಬೇಂದ್ರೆಯವರು ಲಕ್ಷ್ಮೀಶ ಕವಿಯ ಜೈಮಿನಿ ಭಾರತದ ಅಧ್ಯಯನದಲ್ಲಿ ಸಾಂಪ್ರದಾಯಿಕ ಅಲಂಕಾರಶಾಸ್ತ್ರದ ವಿಧಾನವನ್ನು ಅನುಸರಿಸಿದ್ದಾರೆ. ಆಧುನಿಕ ವಿಮರ್ಶಾಪದ್ಧತಿಗಳನ್ನು ಬಿಟ್ಟು ಭಾರತೀಯ ಅನುಸಂಧಾನದ ಪರಂಪರೆಯಲ್ಲಿ ಜೈಮಿನಿ ಭಾರತದ ಅಧ್ಯಯನ ನಡೆಸಿರುವುದನ್ನು ಖ್ಯಾತ ಸಂಶೋಧಕರಾದ ಡಾ. ಎಂ. ಚಿದಾನಂದಮೂರ್ತಿ ಅವರು ಒಂದು ಹೊಸ ಪ್ರಯೋಗ ಎಂದು ಹೇಳಿದ್ದಾರೆ. ನಾದಲೋಲ ಕವಿ ಲಕ್ಷ್ಮೀಶನ ಬಗ್ಗೆ ಅಪಾರ ಆಸ್ಥೆಯುಳ್ಳ ಡಾ. ದ.ರಾ. ಬೇಂದ್ರೆ ಅವರು ಸ್ಫೂರ್ತಿಕೇಂದ್ರವಾಗಿ ಈ ಮಹಾಪ್ರಬಂಧಕ್ಕೆ ನಿಂತಿದ್ದಾರೆ. ಕನ್ನಡದ ವಿದ್ವನ್ಮಣಿಗಳಾದ ತೀ.ನಂ. ಶ್ರೀಕಂಠಯ್ಯ, ಡಿ.ಎಲ್. ನರಸಿಂಹಾಚಾರ್, ಡಾ. ವಿ.ಕೃ. ಗೋಕಾಕ್, ಡಾ. ವಿ. ಸೀತಾರಾಮಯ್ಯ ಮೊದಲಾದವರೊಡನೆ ನಡೆಸಿದ ವಿದ್ವತ್ ಚರ್ಚೆಯ ಫಲಸ್ವರೂಪವಾಗಿ ಡಾ. ವಾಮನ ಬೇಂದ್ರೆಯವರು ಸಂಶೋಧನೆಯ ನವನೀತವನ್ನು ನಮಗೆ ನೀಡಿದ್ದಾರೆ. ಲಕ್ಷ್ಮೀಶ ಕವಿಯ ಬಗೆಗೆ ಅಧ್ಯಯನ ಮಾಡುವವರು ಡಾ. ವಾಮನ ಬೇಂದ್ರೆಯವರ ಮಹಾಪ್ರಬಂಧವನ್ನು ನೋಡಿಯೇ ಮುಂದುವರಿಯಬೇಕು. ಬಹುವರ್ಷಗಳ ಶ್ರಮದ ದುಡಿಮೆ, ಅಧ್ಯಯನದಿಂದಾಗಿ ಈ ಪ್ರಬಂಧವು ಡಾ. ವಾಮನ ಬೇಂದ್ರೆಯವರಿಗೆ ಕೀರ್ತಿಯನ್ನು ತಂದುಕೊಟ್ಟಿದೆ.

'ಲಕ್ಷ್ಮೀಶನ ಜೈಮಿನಿ ಭಾರತ : ಒಂದು ಅಧ್ಯಯನ' ಮಹಾಪ್ರಬಂಧದ ವಸ್ತು ಸಂಯೋಜನೆ ವಿಶಿಷ್ಟವಾದದ್ದು. ಡಾ. ವಾಮನ ಬೇಂದ್ರೆಯವರು ಭಾರತೀಯ ಕಾವ್ಯಮೀಮಾಂಸೆಯಲ್ಲಿ ಪ್ರತಿಪಾದಿತವಾದ ಸಹೃದಯ ಕೇಂದ್ರಿತ ವಿಮರ್ಶೆಯನ್ನು ಮತ್ತು ವಿದ್ವತ್ ಪರಂಪರೆಯ ಸಂಶೋಧನೆಯ ನೆಲೆಗಳಿಂದ ಎರಡು ಪ್ರತ್ಯೇಕ ಭಾಗಗಳಲ್ಲಿ ಈ ಮಹಾಪ್ರಬಂಧವನ್ನು ಸಂರಚಿಸಿದ್ದಾರೆ. ಲಕ್ಷ್ಮೀಶ ಕವಿಯ ಜೈಮಿನಿ ಭಾರತಕ್ಕೆ ಸಂಬಂಧಿಸಿದಂತೆ ವಿದ್ವಾಂಸರ ವಿಧವಿಧದ ವಾದಗಳನ್ನು ಯಾವುದೇ ಪೂರ್ವಾಗ್ರಹಕ್ಕೆ ಒಳಗಾಗದೆ ಮುಕ್ತ ಚರ್ಚೆಗೆ ಗುರಿಪಡಿಸಿ ಸಮನ್ವಯದ ಹಾದಿಯಲ್ಲಿ ಡಾ. ವಾಮನ ಬೇಂದ್ರೆಯವರು ವಿಚಾರಗಳನ್ನು ಮಂಡಿಸಿದ್ದಾರೆ. ನಮ್ಮ ಆಲೋಚನೆಯ ಕ್ಷಿತಿಜವನ್ನು ವಿಸ್ತರಿಸಿದ್ದಾರೆ. ಇಲ್ಲಿ ಪ್ರಕಟವಾದ ಭಾರತೀಯ ಚಿಂತನ ಪರಂಪರೆಯನ್ನು ಕಂಡು ನಾವು ಬೆರಗಾಗುತ್ತೇವೆ.

129. 'ಜೈಮಿನಿ ಭಾರತ' ಅಧ್ಯಯನ ಮಾಡಿ ಪಿ.ಎಚ್.ಡಿ. ಪಡೆದವರು ಯಾರು ?

(1) ವಾಮನ ಬೇಂದ್ರೆ
(2) ರಂ. ಶ್ರೀ. ಮುಗಳಿ
(3) ಚಿದಾನಂದಮೂರ್ತಿ
(4) ದ.ರಾ. ಬೇಂದ್ರೆ

130. ಜೈಮಿನಿ ಭಾರತ ಅಧ್ಯಯನದಲ್ಲಿ ಲೇಖಕರು ಅನುಸರಿಸಿದ ವಿಧಾನ ಏನು ?

(1) ರೂಪಕ, ಉಪಮೆಗಳನ್ನು ವರ್ಣಿಸುವ ವಿಧಾನ
(2) ನವ್ಯ ವಿಮರ್ಶಾ ಪರಿಕರಗಳನ್ನು ಬಳಸಿದ ವಿಧಾನ
(3) ತೌಲನಿಕ ವಿಶ್ಲೇಷಣೆಯ ಮಾದರಿ
(4) ಭಾರತೀಯ ಸಾಂಪ್ರದಾಯಿಕ ಮೀಮಾಂಸೆಯ ವಿಧಾನ

131. ಜೈಮಿನಿ ಭಾರತ ಅಧ್ಯಯನ ಮಾಡುವಾಗ ಚರ್ಚೆಯನ್ನು ಯಾರೊಡನೆ ಮಾಡಲಾಗಿದೆ ?

(1) ಚಿದಾನಂದಮೂರ್ತಿ
(2) ಬಿ.ಎಂ. ಶ್ರೀಕಂಠಯ್ಯ
(3) ತೀ.ನಂ. ಶ್ರೀಕಂಠಯ್ಯ
(4) ಆರ್ ನರಸಿಂಹಾಚಾರ್

132. 'ಪೂರ್ವಾಗ್ರಹ' ಪದದಲ್ಲಿನ ಸಂಧಿಯ ಸ್ವರೂಪವೇನು ?

(1) ಸವರ್ಣದೀರ್ಘಸಂಧಿ
(2) ಲೋಪಸಂಧಿ
(3) ಆಗಮಸಂಧಿ
(4) ಆದೇಶಸಂಧಿ

133. 'ಕ್ಷಿತಿಜ' ಪದದ ಅರ್ಥವೇನು ?

(1) ಆಕಾಶದ ಎತ್ತರ
(2) ಆಕಾಶ ಮತ್ತು ಭೂಮಿ ಸೇರುವ ಊಹಾತ್ಮಕ ಗಡಿರೇಖೆ
(3) ಕಣ್ಣಿನ ದೂರಳತೆಯ ದೃಷ್ಟಿ
(4) ಭೂಮಿಯ ವಿಸ್ತಾರ

134. ಲಕ್ಷ್ಮೀಶನ ಜನ್ಮ ಸ್ಥಳ ಯಾವುದೆಂದು ನಿರ್ಣಯಿಸಲಾಗಿದೆ ?

(1) ಬಿಜಾಪುರದ ಬಾಗೇವಾಡಿ
(2) ಗುಲ್ಬರ್ಗದ ಸುರಪುರ
(3) ಮೈಸೂರಿನ ದೇವನೂರು
(4) ಚಿಕ್ಕಮಗಳೂರಿನ ದೇವನೂರು

135. 'ಜೈಮಿನಿ ಭಾರತ' ಯಾರು ಬರೆದ ಗ್ರಂಥ ?

(1) ರಂ.ಶ್ರೀ. ಮುಗಳಿ
(2) ಲಕ್ಷ್ಮೀಶ
(3) ಬೇಂದ್ರೆ
(4) ವಾಮನ ಬೇಂದ್ರೆ

ನಿರ್ದೇಶನ : ಈ ಕೆಳಗಿನ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.

**136.** ಒಂದು ಅಧ್ಯಾಯವನ್ನು ಮುಗಿಸಿದ ನಂತರ, ಅಧ್ಯಾಪಿಕೆಯು, ಪಠ್ಯದಿಂದ ವಿದ್ಯಾರ್ಥಿಗಳಿಗೆ ವಿವಿಧ ಬಗೆಯ ನಾಮರೂಪಗಳನ್ನು ಗುರುತಿಸಲು ಹೇಳಿದಳು. (ಸಾಮಾನ್ಯ ನಾಮಪದ, ಅನ್ವರ್ಥಕನಾಮ, ಮತ್ತು ಅಮೂರ್ತನಾಮಪದ) ಮತ್ತು ಅವುಗಳನ್ನು ಕೊಟ್ಟಿರುವ ಬಾಕ್ಸ್‌ನಲ್ಲಿ ಬರೆಯಲು ಹೇಳಿದಳು. ಇದು ________ ಉದಾಹರಣೆಯಾಗಿದೆ.

(1) ವ್ಯಾಕರಣ ನಿಯಮಗಳನ್ನು ಊರು ಹೊಡೆಯುವುದು.

(2) ವ್ಯಾಕರಣ ಕಲಿಸುವಿಕೆ.

(3) ವ್ಯಾಕರಣ ಭಾಷಾಂತರ ವಿಧಾನ.

(4) ಸಂದರ್ಭದಲ್ಲಿ ಕಾಣುವ ವ್ಯಾಕರಣ.

**137.** ಈ ಕೆಳಗಿನವುಗಳಲ್ಲಿ ಯಾವುದು ಅಪ್ರಜ್ಞಾಪೂರ್ವಕ ಪ್ರಕ್ರಿಯೆ, ಮತ್ತು ಮಕ್ಕಳು ಇದನ್ನು ಸಂವಹನಕ್ಕಾಗಿ ಬಳಸುತ್ತಾರೆ ?

(1) ಭಾಷಾ ಕಲಿಕೆ

(2) ಭಾಷೆಯ ಅಂತಸ್ಥ ಗ್ರಹಿಕೆ

(3) ದ್ವಿತಿಯ ಭಾಷೆ

(4) ಭಾಷಾ ಸಾಮರ್ಥ್ಯ

**138.** ಒಬ್ಬ ಅಧ್ಯಾಪಿಕೆಯಾಗಿ ನೀವು ವಿದ್ಯಾರ್ಥಿಗಳಲ್ಲಿ ಓದುವಿಕೆಯ ಬಗ್ಗೆ ಆಸಕ್ತಿಯನ್ನು ಹೇಗೆ ಮೂಡಿಸುತ್ತೀರಿ ?

(1) ಅವರಿಗೆ ಪಠ್ಯಪುಸ್ತಕಗಳನ್ನು ಮಾತ್ರ ಓದಲು ಹೇಳುವ ಮೂಲಕ.

(2) ಅಧ್ಯಾಯಗಳ ಗ್ರಹಿಕೆಯನ್ನು ನೆನಪಿನಲ್ಲಿ ಟ್ಟುಕೊಳ್ಳಲು ಹೇಳುವ ಮೂಲಕ.

(3) ಮಕ್ಕಳ ವಯಸ್ಸಿಗೆ ತಕ್ಕಂಥ ಅವರಿಗೆ ಆಸಕ್ತಿ ಮೂಡಿಸುವ ಮಕ್ಕಳ ಸಾಹಿತ್ಯವನ್ನು ಉಪಯೋಗಿಸಿ.

(4) ಪಠ್ಯವನ್ನು ಮಕ್ಕಳ ಮಾತೃಭಾಷೆಯಲ್ಲಿ ಅನುವಾದಿಸಿ, ಮತ್ತು ಪ್ರಶ್ನೆಗಳ ಉತ್ತರವನ್ನು ಕಲಿಯಲು ಹೇಳುವ ಮೂಲಕ.

**139.** ಈ ಕೆಳಗಿನವುಗಳಲ್ಲಿ ಯಾವುದು ವಿದ್ಯಾರ್ಥಿಗಳ ಭಾಷಾ ಕಲಿಕೆಯ ಮಟ್ಟವನ್ನು ನಿರ್ಧರಿಸುವ ವಿಧಾನವಾಗಿದೆ ?

(1) ವಿದ್ಯಾರ್ಥಿಗಳನ್ನು ಒಂದು ಪದ್ಯವನ್ನು ನೆನಪಿನಲ್ಲಿಟ್ಟುಕೊಂಡು ಹಾವಭಾವಗಳೊಡನೆ ಹಾಡಲು ಹೇಳುವುದು.

(2) ಪಠ್ಯದ ಅಧ್ಯಾಯವನ್ನು ವಿದ್ಯಾರ್ಥಿಗಳ ಮಾತೃಭಾಷೆಯಲ್ಲಿ ಅನುವಾದಿಸುವುದು.

(3) ವಿದ್ಯಾರ್ಥಿಗಳಿಗೆ ಅವರ ವಿಚಾರಗಳನ್ನು ಮುಕ್ತವಾಗಿ ಹಂಚಿಕೊಳ್ಳಲು ಅವಕಾಶ ಮಾಡಿಕೊಡುವುದು ಮತ್ತು ಅವರ ಕಲ್ಪನೆಗಳನ್ನು ಬಿಚ್ಚಿಡಲು ಅವಕಾಶ ಕೊಡುವುದು.

(4) ಕವನದಿಂದ ಕಾವ್ಯ ಸಾಧನಗಳನ್ನು ಹುಡುಕಲು ವಿದ್ಯಾರ್ಥಿಗಳನ್ನು ಕೇಳುವುದು.

**140.** ಒಂದು ಸಂದರ್ಭದ ಮತ್ತು ವಿಷಯದ ಜ್ಞಾನವನ್ನು ಆಧರಿಸಿ, ವಿದ್ಯಾರ್ಥಿಗಳು, ತಾವು ಕೇಳಿದ ಒಂದು ಲೇಖಾಂಶದ (passage) ಕುರಿತು ನಿರ್ದಿಷ್ಟ ಅರ್ಥವನ್ನು, ಮತ್ತು ವಾಕ್ಯಗಳನ್ನು, ವಾಕ್ಯಗುಚ್ಛಗಳನ್ನು (phrases) ಮತ್ತು ಪದಗಳನ್ನು ರೂಪಿಸಿಕೊಳುತ್ತಾರೆ. ಕೇಳಿಸಿಕೊಂಡ ಲೇಖಾಂಶವನ್ನು ಈ ಬಗೆಯಲ್ಲಿ ವಿವರಿಸುವುದು ________

(1) ಬಾಟಮ್ ಅಪ್ ಉಪಕೌಶಲ್ಯವಾಗಿದೆ

(2) ಟಾಪ್ ಡೌನ್ ಉಪಕೌಶಲ್ಯವಾಗಿದೆ

(3) ಸಂಪೂರ್ಣ ಭಾಷಾ ಮಾರ್ಗವಾಗಿದೆ (Whole language approach)

(4) ಸಂಘಟಿತ ಮಾರ್ಗವಾಗಿದೆ (Integrated approach)

**141.** ಕಲಿಯುವವರ ಭಾಷಾ ಸಾಮರ್ಥ್ಯದ ಅಭಿವೃದ್ಧಿಯನ್ನು ಉಂಟುಮಾಡುವಲ್ಲಿ, ಈ ಕೆಳಗಿನವುಗಳಲ್ಲಿ ಯಾವುದು ಬಹಳ ಪರಿಣಾಮಕಾರಿಯಾದ ಪ್ರತಿಪುಷ್ಟಿಯನ್ನು (Feedback) ಕೊಡುವ ಮಾರ್ಗವಾಗಿದೆ ?

(1) ಅಧ್ಯಾಪಿಕೆಯು ವಿದ್ಯಾರ್ಥಿಯು ಮಾಡುವ ತಪ್ಪುಗಳನ್ನು ಕೂಡಲೇ ತಿದ್ದಬೇಕು.

(2) ಯಾವ ವಿದ್ಯಾರ್ಥಿಗೆ ಭಾಷಾ ಬಳಕೆಯು ಹೆಚ್ಚು ಸಮಸ್ಯೆಯಾಗಿದೆಯೋ ಅಂಥವರಿಗೆ ಪ್ರತಿಪುಷ್ಟಿಯನ್ನು (Feedback) ಅಧ್ಯಾಪಿಕೆಯು ಕೊಡಬೇಕು.

(3) ಅಧ್ಯಾಪಿಕೆಯು ಮೊದಲು ಕಲಿಯುವವರ ತಪ್ಪಿನ ವಿಶ್ಲೇಷಣೆ ಮಾಡಬೇಕು, ನಂತರ ಈ ತಪ್ಪುಗಳನ್ನು ಸರಿ ಮಾಡಲು, ಕ್ಲಾಸಿನಲ್ಲಿ ವಿದ್ಯಾರ್ಥಿಗಳು ತಮ್ಮ ಮಾತೃಭಾಷೆಯಲ್ಲಿ ಮಾಡುವ ತಪ್ಪುಗಳನ್ನು ಕಡೆಗಣಿಸಿ, ಒಂದು ವಿಧಾನವನ್ನು ರೂಪಿಸಬೇಕು.

(4) ಕ್ಲಾಸಿನಲ್ಲಿ ವಿದ್ಯಾರ್ಥಿಗಳು ತಮ್ಮ ತಪ್ಪುಗಳನ್ನು ಎತ್ತಿ ತೋರಿಸುವುದನ್ನು ಇಷ್ಟಪಡುವುದಿಲ್ಲ ಎಂದು ತಿಳಿದು, ಅಧ್ಯಾಪಿಕೆಯು ಅವರ ತಪ್ಪುಗಳನ್ನು ಕಡೆಗಣಿಸಬೇಕು.

**142.** ಪಠ್ಯಪುಸ್ತಕದ ಆಚೆಗೆ ಹೋಗುವುದು ಅಂದರೆ

(1) ಪಠ್ಯಪುಸ್ತಕದ ಮಟ್ಟದಿಂದ ಕೊಂಚ ಮೇಲುಮಟ್ಟದಲ್ಲಿ ಕಲಿಸುವುದು.

(2) ಪಠ್ಯಪುಸ್ತಕವಲ್ಲದ ಸಹಾಯಕ ಸಂಪನ್ಮೂಲವನ್ನು ಒದಗಿಸುವುದು.

(3) ಪಠ್ಯಪುಸ್ತಕವನ್ನು ಪೂರ್ಣವಾಗಿ ಮುಗಿಸಲೇಬೇಕು ಎನ್ನುವ ಅವಶ್ಯಕತೆ ಇಲ್ಲದಿರುವುದು.

(4) ವಿದ್ಯಾರ್ಥಿಗಳ ತಿಳುವಳಿಕೆಯ ಮಟ್ಟಕ್ಕಿಂತ, ಪಠ್ಯಪುಸ್ತಕದ ಕಠಿಣತೆಯ ಮಟ್ಟ ಹೆಚ್ಚಾಗಿರುವುದು.

**143.** ಒಂದು ಭಾಷೆಯಲ್ಲಿ ಅಧ್ಯಾಯವನ್ನು ಕಲಿಸುವಾಗ ಅಧ್ಯಾಪಿಕೆಯು ವಿಜ್ಞಾನದ ಹಾಗೂ ಸಮಾಜವಿಜ್ಞಾನದ ಪಾಠಗಳನ್ನು ಉಪಯೋಗಿಸುತ್ತಾಳೆ ಮತ್ತು ಅದು ಭಾಷಾ ಅಧ್ಯಾಯಕ್ಕೆ ಸಂಬಂಧ ಪಟ್ಟಿದ್ದರಿಂದ ವಿದ್ಯಾರ್ಥಿಗಳನ್ನು ಅದರ ವಸ್ತುವನ್ನು ಓದಲು ಹೇಳುತ್ತಾಳೆ. ಈ ವಿಧಾನವನ್ನು ಹೀಗೆ ಕರೆಯುತ್ತಾರೆ

(1) ಅಂತರ್ ಶಿಸ್ತೀಯ

(2) ಪಠ್ಯದ ಆಚೆಗಿನ ಭಾಷೆ

(3) ಬಹುಬಗೆಯ (pluralistic) ಭಾಷಾ ಕಲಿಸುವಿಕೆ

(4) ವಿಷಯ – ಭಾಷೆ – ಕಲಿಸುವಿಕೆ

**144.** ಕಲಿಯುವವರಲ್ಲಿ ಮಾತನಾಡುವ ಕೌಶಲ್ಯವನ್ನು ಈ ಬಗೆಯಲ್ಲಿ ಹೆಚ್ಚು ಅಭಿವೃದ್ಧಿಗೊಳಿಸಬಹುದು

(1) ಸಂಕೀರ್ಣವಾದ, ಸವಾಲಾಗುವಂಥ ಪಠ್ಯವನ್ನು ಓದುವುದರ ಮೂಲಕ

(2) ಅಧ್ಯಾಪಿಕೆಯು ಕೊಟ್ಟ ಮಾದರಿ ಉಚ್ಚಾರಣಾ ವಿನ್ಯಾಸವನ್ನು ಕೇಳುವುದರ ಮೂಲಕ

(3) ವಾಸ್ತವ ಜೀವನ ಸಂದರ್ಭದಲ್ಲಿ ಸಂವಹನ ಮಾಡುವುದರ ಮೂಲಕ

(4) ಮಾತನಾಡುವಾಗ ಎಲ್ಲ ತಪ್ಪುಗಳನ್ನು ದೂರ ಮಾಡುವುದರ ಮೂಲಕ

145. ವ್ಯಾಕರಣವನ್ನು ಕಲಿಯುವುದು ಕಲಿಯುವವರಲ್ಲಿ ಈ ಕೆಳಗಿನದ್ದು ಸುಧಾರಿಸಲು ಸಹಾಯ ಮಾಡುತ್ತದೆ

(1) ಸಾಕ್ಷರತೆ

(2) ನಿಖರತೆ

(3) ನಿರರ್ಗಳತೆ

(4) ಶಬ್ದಕೋಶ

146. ಭಾಷಾ ಅಧ್ಯಾಪಿಕೆಯು ವಿದ್ಯಾರ್ಥಿಗಳನ್ನು ಮಳೆಗಾಲದ ದಿನ ಕುರಿತಂತೆ ತಮ್ಮ ಅನುಭವವನ್ನು ತಮ್ಮ ಪಕ್ಕದಲ್ಲಿ ಕುಳಿತ ಸಂಗಾತಿಗೆ ಹೇಳಲು ಕೇಳುತ್ತಾಳೆ. ಈ ಅಭ್ಯಾಸವು ________

(1) ಅವರು ಹೇಳುವಾಗ ಕ್ಲಾಸಿನಲ್ಲಿ ಗದ್ದಲವುಂಟಾಗುವಂತೆ ಮಾಡುತ್ತದೆ

(2) ಅವರ ವಿಚಾರಗಳ ಮೌಖಿಕ ಅಭಿವ್ಯಕ್ತಿಯನ್ನು ಹೆಚ್ಚು ಮಾಡುತ್ತದೆ

(3) ಕ್ಲಾಸಿನಲ್ಲಿ ಅಶಿಸ್ತಿನ್ನು ಮೂಡಿಸುತ್ತದೆ

(4) ಪಠ್ಯಪುಸ್ತಕವನ್ನು ಓದುವ ಬೇಜಾರಿನ ಕೆಲಸಕ್ಕೆ ತಡೆಹಾಕುತ್ತದೆ

147. ಬರವಣಿಗೆಯ ಪ್ರಕ್ರಿಯಾತ್ಮಕ ವಿಧಾನವು ಇದನ್ನು ಒಳಗೊಂಡಿದೆ

(a) ಸಂಪಾದಿಸುವುದು (Editing)

(b) ತೀವ್ರ ಆಲೋಚನೆಗೆ ಗುರಿಪಡಿಸುವುದು (Brain storming)

(c) ಪುನರಾವರ್ತನೆ (Revising)

(d) ಕಚ್ಚಾ ಬರಹ ನಿರ್ಮಾಣ (Drafting)

(1) a b c d

(2) b c a d

(3) a d c b

(4) b d c a

148. ಭಾಷಾ ಅಧ್ಯಾಪಿಕೆಯು ವಿದ್ಯಾರ್ಥಿಗಳನ್ನು ಅವರ ಐದು ಅತ್ಯುತ್ತಮ ಸಾಮಗ್ರಿಗಳನ್ನು ಅವರ ಪೋರ್ಟ್‌ಫೋಲಿಯೋದಲ್ಲಿ ಇಡಲು ಹೇಳುತ್ತಾಳೆ. ಉಳಿದವುಗಳನ್ನು ತೆಗೆದುಬಿಡಲು ಹೇಳುತ್ತಾಳೆ. ನಂತರ ಅವರ ಐದು ಅತ್ಯುನ್ನತ ಆಯ್ಕೆಗಳ ಬಗ್ಗೆ ಚಿಂತನೆ ಮಾಡಲು ಹೇಳುತ್ತಾಳೆ. ಈ ಚಿಂತನೆಗಳನ್ನು ಹೀಗೆ ಕರೆಯಬಹುದು

(1) ಸಮಾನ ಮೌಲ್ಯಾಂಕನ (Peer Assessment)

(2) ವೈಯಕ್ತಿಕವಾದ ಮೌಲ್ಯಾಂಕನ (Self-Assessment)

(3) ಶಿಕ್ಷಕರ ಮೌಲ್ಯಾಂಕನ (Teacher's Assessment)

(4) ಸಂಪೂರ್ಣ ಮೌಲ್ಯಾಂಕನ (Summative Assessment)

149. ಪ್ರಾಥಮಿಕ ಘಟ್ಟದಲ್ಲಿ ಭಾಷಾಕಲಿಕೆಯಲ್ಲಿ ಈ ಕೆಳಗಿನ ಸಂಪನ್ಮೂಲಗಳಲ್ಲಿ ಯಾವುದು ಅತ್ಯಂತ ಮಹತ್ವದ್ದು ?

(1) ಮಕ್ಕಳ ಸಾಹಿತ್ಯ

(2) ವರ್ತಮಾನ ಪತ್ರಿಕೆ

(3) ಕಂಪ್ಯೂಟರ್

(4) ರಿಯಾಲಿಯಾ

150. ವಿದ್ಯಾರ್ಥಿಗಳಲ್ಲಿ ಮೌಖಿಕ ಕೌಶಲ್ಯಗಳನ್ನು ಅಭಿವೃದ್ಧಿಗೊಳಿಸುವಲ್ಲಿ ಈ ಕೆಳಗಿನವುಗಳಲ್ಲಿ ಯಾವುದು ಅತ್ಯಂತ ಕಡಿಮೆ ಮಹತ್ವದ್ದು ?

(1) ಒಂದು ವಸ್ತುವನ್ನು ವರ್ಣಿಸುವುದು

(2) ಅವರದೇ ಭಾಷೆಯಲ್ಲಿ ಕಥೆಯನ್ನು ಹೇಳುವುದು

(3) ಅಧ್ಯಾಪಿಕೆಯು ಹೇಳಿದ ನಂತರ ಕಥೆಯನ್ನು ಪುನರಾವರ್ತಿಸುವುದು

(4) ಒಂದು ಘಟನೆಯನ್ನು ವರ್ಣಿಸುವುದು

## SPACE FOR ROUGH WORK

**ಕೆಳಗೆ ಕಾಣಿಸಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ :**

1. ಕೇಳಲಾಗಿರುವ ಪ್ರಶ್ನೆಗಳಿಗೆ ಉತ್ತರಿಸಬೇಕಾದ ವಿಧಾನವನ್ನು ಕೊಡಲಾಗಿರುವ ಪ್ರಶ್ನೆಪತ್ರಿಕೆಯಲ್ಲಿ ಸ್ಪಷ್ಟವಾಗಿ ಸೂಚಿಸಲಾಗಿದೆ, ಉತ್ತರಿಸುವ ಮುನ್ನ ಸೂಚನೆಗಳನ್ನು ಸರಿಯಾಗಿ ಓದಿ ಅರ್ಥ ಮಾಡಿಕೊಳ್ಳಬೇಕು.
2. ಪ್ರತಿಯೊಂದು ಪ್ರಶ್ನೆಗೆ 4 ವಿಕಲ್ಪ ಉತ್ತರಗಳನ್ನು ಕೊಡಲಾಗಿದೆ. (OMR) ಉತ್ತರ ಪತ್ರಿಕೆಯ ಪುಟ-2 ರಲ್ಲಿ ಕೇವಲ ಒಂದು ವೃತ್ತವನ್ನು ಮಾತ್ರ ನೀಲಿ ಕಪ್ಪು/ ಬಾಲ್ ಪಾಯಿಂಟ್ ಪೆನ್ ನಿಂದ ತುಂಬಿಸಬೇಕು. ಒಂದು ಬಾರಿ ಉತ್ತರ ನಮೂದಿಸಿದ ಮೇಲೆ ಬದಲಾಯಿಸಲು ಸಾಧ್ಯವಿಲ್ಲ.
3. ಉತ್ತರ ಪತ್ರಿಕೆ ಮಡಚಬಾರದು, ಈ ಬಗ್ಗೆ ಪರೀಕ್ಷಾರ್ಥಿ ಎಚ್ಚರಿಕೆ ವಹಿಸಬೇಕು, ಉತ್ತರ ಪತ್ರಿಕೆಯ ಮೇಲೆ ಬೇರೆ ಯಾವುದೇ ಗುರುತು ಬೀಳಬಾರದು. ಪರೀಕ್ಷಾರ್ಥಿ ತನ್ನ ಅನುಕ್ರಮಣಿಕೆ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ನಿರ್ಧಾರಿತವಾದ ಸ್ಥಳವಲ್ಲದೇ ಬೇರೆ ಎಲ್ಲಿಯೂ ಬರೆಯಬಾರದು.
4. ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಗಳನ್ನು ಎಚ್ಚರಿಕೆಯಿಂದ ಉಪಯೋಗಿಸಿ, ಯಾಕೆಂದರೆ ಯಾವುದೇ ಪರಿಸ್ಥಿತಿಯಲ್ಲಿ (ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಕೋಡ್ ಅಥವಾ ಸಂಖ್ಯೆ ಬೇರೆ ಬೇರೆಯಾಗಿರುವ ಸ್ಥಿತಿಯನ್ನು ಹೊರತು ಪಡಿಸಿ) ಬೇರೆ ಪ್ರಶ್ನೆ ಪತ್ರಿಕೆ ಕೊಡಲಾಗುವುದಿಲ್ಲ.
5. ಪ್ರಶ್ನೆ ಪತ್ರಿಕೆ/ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಸಂಕೇತ ಮತ್ತು ಸಂಖ್ಯೆಯನ್ನು ಪರೀಕ್ಷಾರ್ಥಿಯು ಹಾಜರಿ ಪತ್ರದಲ್ಲಿ ಸರಿಯಾಗಿ ಬರೆಯಬೇಕು (Attendance Sheet).
6. OMR ಉತ್ತರಪತ್ರಿಕೆಯಲ್ಲಿ ಸಂಕೇತಿಸಿದ ಮಾಹಿತಿಗಳನ್ನು ಗಣಕಯಂತ್ರವು ಓದುತ್ತದೆ. ಆದ್ದರಿಂದ ಯಾವುದೇ ಮಾಹಿತಿಗಳನ್ನು ಅಪೂರ್ಣಗೊಳಿಸಕೂಡದು ಮತ್ತು ಪ್ರವೇಶಪತ್ರದಲ್ಲಿರುವ ಮಾಹಿತಿಗೆ ಅದು ಭಿನ್ನವಾಗಬಾರದು.
7. ಪರೀಕ್ಷಾರ್ಥಿಯು, ಪರೀಕ್ಷಾ ಹಾಲ್/ಕೋಣೆಯಲ್ಲಿ ಪ್ರವೇಶ ಕಾರ್ಡ್ ಅಲ್ಲದೇ ಬೇರೆ ಯಾವ ರೀತಿಯ ಪಠ್ಯಸಾಮಗ್ರಿ, ಮುದ್ರಿತ ಅಥವಾ ಕೈಯಲ್ಲಿ ಬರೆದ, ಕಾಗದದ, ಚೀಟಿಗಳು, ಪೇಜರ್, ಮೊಬೈಲ್ ಫೋನು, ಇಲೆಕ್ಟ್ರಾನಿಕ್ ಉಪಕರಣಗಳು ಅಥವಾ ಬೇರೆ ಪ್ರಕಾರದ ಸಾಮಗ್ರಿಗಳನ್ನು ತರುವುದು ಅಥವಾ ಉಪಯೋಗ ಮಾಡಲು ಅನುಮತಿ ಇಲ್ಲ.
8. ಪರೀಕ್ಷಾ ಕೊಠಡಿಯೊಳಗೆ ಮೊಬೈಲ್ ಫೋನ್, ವೈರ್ ಲೆಸ್ ಸಂಪರ್ಕ ಉಪಕರಣಗಳನ್ನು ಮತ್ತಿತರ ನಿಷೇಧಿತ ವಸ್ತುಗಳನ್ನು ತರಬಾರದು, ಇದನ್ನು ಮೀರಿ ನಡೆದಲ್ಲಿ ಅಥವಾ ಉಲ್ಲಂಘಿಸಿದರೆ ಆ ಅಭ್ಯರ್ಥಿಗಳು ಶಿಕ್ಷಾರ್ಹರಾಗುತ್ತಾರೆ ಮತ್ತು ಅವರನ್ನು ಪರೀಕ್ಷೆಯಿಂದ ಹೊರಹಾಕಲೂಬಹುದು.
9. ಕೇಳಿದಾಗ, ಪ್ರತಿಯೊಬ್ಬ ಪರೀಕ್ಷಾರ್ಥಿ ತನ್ನ ಪ್ರವೇಶ ಕಾರ್ಡ್ ನ್ನು ನಿರೀಕ್ಷಕರಿಗೆ ತೋರಿಸಬೇಕು.
10. ಅಧೀಕ್ಷಕರು ಅಥವಾ ನಿರೀಕ್ಷಕರ ವಿಶೇಷ ಅನುಮತಿ ಇಲ್ಲದೇ ಯಾರೇ ಪರೀಕ್ಷಾರ್ಥಿ ತನ್ನ ಸ್ಥಾನವನ್ನು ಬಿಡಬಾರದು.
11. ಕಾರ್ಯನಿರತ ನಿರೀಕ್ಷಕರಿಗೆ ತನ್ನ ಉತ್ತರ ಪತ್ರಿಕೆ ಕೊಡದೇ ಹಾಗೂ ಹಾಜರೀ ಪತ್ರದಲ್ಲಿ ಎರಡು ಬಾರಿ ಸಹಿ ಹಾಕದೇ ಯಾವ ಪರೀಕ್ಷಾರ್ಥಿಯೂ ಪರೀಕ್ಷಾ ಹಾಲ್ ನಿಂದ ಹೊರಗೆ ಹೋಗಬಾರದು. ಹಾಗೊಂದು ವೇಳೆ ಪರೀಕ್ಷಾರ್ಥಿ ಎರಡನೇ ಬಾರಿ ಹಾಜರಿ ಪತ್ರದಲ್ಲಿ ಸಹಿ ಮಾಡದೇ ಇದ್ದರೆ, ಆ ವ್ಯಕ್ತಿ, ಉತ್ತರ ಪತ್ರಿಕೆ ಹಿಂದೆ ಕೊಟ್ಟಿಲ್ಲ ಮತ್ತು ಇದು ಅನುಚಿತ ಸಾಧನ ಬಳಕೆಯ ಪ್ರಕರಣ ಎಂದು ತಿಳಿದು ಸೂಕ್ತ ಕ್ರಮ ಕೈಗೊಳ್ಳಲಾಗುವುದು.
12. ಇಲೆಕ್ಟ್ರಾನಿಕ್/ಹಸ್ತ ಚಾಲನೆಯ ಗಣಕಯಂತ್ರ (calculator) ಉಪಯೋಗ ನಿಷೇಧಿಸಲಾಗಿದೆ.
13. ಪರೀಕ್ಷಾ ಹಾಲ್ ನಲ್ಲಿ, ಪರೀಕ್ಷಾರ್ಥಿ ಬೋರ್ಡ್ ನ ಎಲ್ಲಾ ನೀತಿ ನಿಯಮಾವಳಿಗಳ ಪಾಲನೆಗಾಗಿ ಬದ್ಧನಾಗಿರುತ್ತಾರೆ. ಅನುಚಿತ ಸಾಧನಗಳ ಎಲ್ಲಾ ಪ್ರಕರಣಗಳನ್ನು ಬೋರ್ಡ್ ನ ನೀತಿ-ನಿಯಮಾವಳಿಗಳ ಅನುಸಾರ ನಿರ್ಧರಿಸಲಾಗುವುದು.
14. ಎಂತಹುದೇ ಪರಿಸ್ಥಿತಿಯಲ್ಲಿ ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಯಾವುದೇ ಭಾಗವನ್ನು ಬೇರೆ ಮಾಡಬಾರದು.
15. ಪರೀಕ್ಷೆ ಮುಗಿದ ನಂತರ, ಪರೀಕ್ಷಾರ್ಥಿ, ಪರೀಕ್ಷಾ ಹಾಲ್/ಕೋಣೆಯಿಂದ ಹೊರಗೆ ಬರುವ ಮೊದಲು, ನಿರೀಕ್ಷಕರಿಗೆ ಉತ್ತರ ಪತ್ರಿಕೆಯನ್ನು ತಪ್ಪದೇ ಒಪ್ಪಿಸಬೇಕು. ಪರೀಕ್ಷಾರ್ಥಿ ಪ್ರಶ್ನೆ ಪತ್ರಿಕೆಯನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.

## निम्नलिखित निर्देशों को ध्यान से पढ़ें :

1. जिस प्रकार से विभिन्न प्रश्नों के उत्तर दिए जाने हैं उसका वर्णन परीक्षा पुस्तिका में किया गया है, जिसे आप प्रश्नों का उत्तर देने से पहले ध्यान से पढ़ लें ।
2. प्रत्येक प्रश्न के लिए दिए गए चार विकल्पों में से सही उत्तर के लिए OMR उत्तर पत्र के **पृष्ठ-2** पर केवल एक वृत्त को ही पूरी तरह **काले/नीले बॉल पॉइन्ट पेन** से भरें । एक बार उत्तर अंकित करने के बाद उसे बदला नहीं जा सकता है ।
3. परीक्षार्थी सुनिश्चित करें कि इस उत्तर पत्र को मोड़ा न जाए एवं उस पर कोई अन्य निशान न लगाएँ । परीक्षार्थी अपना अनुक्रमांक उत्तर-पत्र में निर्धारित स्थान के अतिरिक्त अन्यत्र न लिखें ।
4. परीक्षा पुस्तिका एवं उत्तर पत्र का ध्यानपूर्वक प्रयोग करें, क्योंकि किसी भी परिस्थिति में (केवल परीक्षा पुस्तिका एवं उत्तर पत्र के संकेत या संख्या में भिन्नता की स्थिति को छोड़कर) दूसरी परीक्षा पुस्तिका उपलब्ध नहीं करायी जाएगी ।
5. परीक्षा पुस्तिका / उत्तर पत्र में दिए गए परीक्षा पुस्तिका संकेत व संख्या को परीक्षार्थी सही तरीके से हाज़िरी-पत्र में लिखें ।
6. OMR उत्तर पत्र में कोडित जानकारी को एक मशीन पढ़ेगी । इसलिए कोई भी सूचना अधूरी न छोड़ें और यह प्रवेश-पत्र में दी गई सूचना से भिन्न नहीं होनी चाहिए ।
7. परीक्षार्थी द्वारा परीक्षा हॉल/कक्ष में प्रवेश-पत्र के सिवाय किसी प्रकार की पाठ्य-सामग्री, मुद्रित या हस्तलिखित, कागज़ की पर्चियाँ, पेजर, मोबाइल फोन, इलेक्ट्रॉनिक उपकरण या किसी अन्य प्रकार की सामग्री को ले जाने या उपयोग करने की अनुमति नहीं है ।
8. मोबाइल फोन, बेतार संचार युक्तियाँ (स्वीच ऑफ अवस्था में भी) और अन्य प्रतिबंधित वस्तुएँ परीक्षा हॉल/कक्ष में नहीं लाई जानी चाहिए । इस सूचना का पालन न होने पर इसे परीक्षा में अनुचित साधनों का प्रयोग माना जाएगा और उनके विरुद्ध कार्यवाही की जाएगी, परीक्षा रद्द करने सहित ।
9. पूछे जाने पर प्रत्येक परीक्षार्थी, निरीक्षक को अपना प्रवेश-पत्र दिखाएँ ।
10. केन्द्र अधीक्षक या निरीक्षक की विशेष अनुमति के बिना कोई परीक्षार्थी अपना स्थान न छोड़ें ।
11. कार्यरत निरीक्षक को अपना उत्तर पत्र दिए बिना एवं हाज़िरी-पत्र पर दुबारा हस्ताक्षर किए बिना परीक्षार्थी परीक्षा हॉल/कक्ष नहीं छोड़ेंगे । यदि किसी परीक्षार्थी ने दूसरी बार हाज़िरी-पत्र पर हस्ताक्षर नहीं किए, तो यह माना जाएगा कि उसने उत्तर पत्र नहीं लौटाया है और यह अनुचित साधन का मामला माना जाएगा । **परीक्षार्थी अपने बाएँ हाथ के अंगूठे का निशान हाज़िरी-पत्र में दिए गए स्थान पर अवश्य लगाएँ ।**
12. इलेक्ट्रॉनिक / हस्तचालित परिकलक का उपयोग वर्जित है ।
13. परीक्षा हॉल/कक्ष में आचरण के लिए परीक्षार्थी बोर्ड के सभी नियमों एवं विनियमों द्वारा नियमित हैं । अनुचित साधनों के सभी मामलों का फैसला बोर्ड के नियमों एवं विनियमों के अनुसार होगा ।
14. किसी हालत में परीक्षा पुस्तिका और उत्तर पत्र का कोई भाग अलग न करें ।
15. **परीक्षा सम्पन्न होने पर, परीक्षार्थी हॉल / कक्ष छोड़ने से पूर्व उत्तर पत्र कक्ष-निरीक्षक को अवश्य सौंप दें । परीक्षार्थी अपने साथ इस परीक्षा पुस्तिका को ले जा सकते हैं ।**

## READ THE FOLLOWING INSTRUCTIONS CAREFULLY:

1. The manner in which the different questions are to be answered has been explained in the Test Booklet which you should read carefully before actually answering the questions.
2. Out of the four alternatives for each question, only one circle for the correct answer is to be darkened completely with **Black/Blue Ball Point Pen** on **Side-2** of the OMR Answer Sheet. The answer once marked is not liable to be changed.
3. The candidates should ensure that the Answer Sheet is not folded. Do not make any stray marks on the Answer Sheet. Do not write your Roll No. anywhere else except in the specified space in the Answer Sheet.
4. Handle the Test Booklet and Answer Sheet with care, as under no circumstances (except for discrepancy in Test Booklet Code or Number and Answer Sheet Code or Number), another set will be provided.
5. The candidates will write the correct Test Booklet Code and Number as given in the Test Booklet / Answer Sheet in the Attendance Sheet.
6. A machine will read the coded information in the OMR Answer Sheet. Hence, no information should be left incomplete and it should not be different from the information given in the Admit Card.
7. Candidates are not allowed to carry any textual material, printed or written, bits of papers, pager, mobile phone, electronic device or any other material except the Admit Card inside the examination hall/room.
8. Mobile phones, wireless communication devices (even in switched off mode) and the other banned items should not be brought in the examination halls/rooms. Failing to comply with this instruction, it will be considered as using unfair means in the examination and action will be taken against them including cancellation of examination.
9. Each candidate must show on demand his / her Admit Card to the Invigilator.
10. No candidate, without special permission of the Centre Superintendent or Invigilator, should leave his / her seat.
11. The candidates should not leave the Examination Hall/Room without handing over their Answer Sheet to the Invigilator on duty and sign the Attendance Sheet twice. Cases where a candidate has not signed the Attendance Sheet second time will be deemed not to have handed over the Answer Sheet and dealt with as an unfair means case. **The candidates are also required to put their left hand THUMB impression in the space provided in the Attendance Sheet.**
12. Use of Electronic / Manual Calculator is prohibited.
13. The candidates are governed by all Rules and Regulations of the Board with regard to their conduct in the Examination Hall/Room. All cases of unfair means will be dealt with as per Rules and Regulations of the Board.
14. No part of the Test Booklet and Answer Sheet shall be detached under any circumstances.
15. **On completion of the test, the candidate must hand over the Answer Sheet to the Invigilator in the Hall / Room.** ***The candidates are allowed to take away this Test Booklet with them.***